# ST ALOYSIUS

ESTD : 1880

(DEEMED TO BE UNIVERSITY)

MANGALURU, KARNATAKA 575003 - INDIA

# NEWS CLIPPINGS

## 01-05-2026 TO 15-05-2026

*Vijayavani 01-05-2026*

# ರಂಗ ಪಯಣದಿಂದ ಹೊಸ ಚೈತನ್ಯ

ಮಂಗಳೂರು: ರಂಗ ಚಟುವಟಿಕೆಗಳು, ಬೇಸಿಗೆ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಹೊಸ ಚೈತನ್ಯವನ್ನು ತುಂಬುತ್ತವೆ ಎಂದು ಎಸಿಪಿ ವಿಜಯ ಕಾಂತಿ ಹೇಳಿದರು.

ಅಲೋಸಿಯಸ್ ಕಾಲೇಜಿನ ರಂಗ ಅಧ್ಯಯನ ಕೇಂದ್ರದ ಎಲ್‌ಸಿಆರ್ ರಂಗ ಮಂದಿರದಲ್ಲಿ ಕಲಾಬಿ 5ನೇ ಸಂವತ್ಸರದ ಸಂಭ್ರಮ ಮತ್ತು ಕಲಾ ಹಬ್ಬಗಳ ಕಿಶೋರಿ ರಂಗ ಪಯಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಉದ್ಯಮಿ ಈಶ್ವರ ಪ್ರಸಾದ್ ಶೆಟ್ಟಿ ಉದ್ಘಾಟಿಸಿ ನಾಟ್ಯ, ನಾಟಕ, ಯಕ್ಷಗಾನ ಎಲ್ಲವನ್ನು ಮುನ್ನಡೆಸುತ್ತಿರುವ ಕಲಾಭಿ ಮುಂದಕ್ಕೂ ಹೀಗೆ ಉಜ್ವಲವಾಗಿ ಬೆಳಗಲಿ ಎಂದು ಹಾರೈಸಿದರು. ಡಾ.ಮೇಲ್ವಿನ್ ಡಿಕುನ್ಹ ಮಕ್ಕಳ ಕಿಶೋರಿ ಉಪಸ್ಥಿತರಿದ್ದರು. ಕಲಾಭಿ ಯುವ ಪುರಸ್ಕಾರ 2026 ರಕ್ಷ ಪೂಜಾರಿ ಅವರಿಗೆ ನೀಡಿ ಗೌರವಿಸಲಾಯಿತು.

ಕಲಾಭಿಯ ನಿಧಿ ಕಾಮತ್ ಕಾರ್ಯಕ್ರಮ ನಿರೂಪಿಸಿದರು. ಸುರೇಶ್ ಬಿ. ವರ್ಕಾಡಿ ಸ್ವಾಗತಿಸಿದರು, ಉಜ್ವಲ್ ಯು.ವಿ. ವಂದಿಸಿದರು. ಕಿಶೋರಿ ರಂಗ ಪಯಣ ಮಕ್ಕಳಿಂದ ಭುವನ್ ಮಣಿಪಾಲ್ ನಿರ್ದೇಶನದ ಅಲ್ಲಾವುದ್ದೀನ್ ಮಾಯಾ ದೀಪ ಎಂಬ ನಾಟಕ ಪ್ರದರ್ಶಿಸಲಾಯಿತು.



ರಕ್ಷ ಪೂಜಾರಿ ಅವರಿಗೆ ಕಲಾಭಿ ಯುವ ಪುರಸ್ಕಾರ 2026 ಪ್ರದಾನ ಮಾಡಲಾಯಿತು. ವಿಜಯ ಕಾಂತಿ, ಈಶ್ವರ ಪ್ರಸಾದ್ ಶೆಟ್ಟಿ, ಡಾ.ಮೇಲ್ವಿನ್ ಡಿಕುನ್ಹ ಮೊದಲಾದವರಿದ್ದರು.

Udayavani 04-05-2026

# ಕಲಾಭಿ 5ನೇ ಸಂಭ್ರಮ: ಮಕ್ಕಳ ನಾಟಕೋತ್ಸವ

**ಮಹಾನಗರ, ಮೇ 3:** ಕಲಾಭಿ 5ನೇ ಸಂವತ್ಸರದ ಸಂಭ್ರಮ ಮತ್ತು ಕಲಾ ಹಬ್ಬಗಳ ಸಲುವಾಗಿ ಮಂಗಳೂರಿನಲ್ಲಿ ನಡೆಯುವ ಏಕಮಾತ್ರ ಮಕ್ಕಳ ನಾಟಕೋತ್ಸವವಾದ ಕಿಶೋರ ರಂಗ ಪಯಣ 2026, ಮೂರು ದಿನಗಳ ಮಕ್ಕಳ ನಾಟಕೋತ್ಸವದ ಉದ್ಘಾಟನೆ ಸಮಾರಂಭ ಸಂತ ಅಲೋಶಿಯಸ್ ಕಾಲೇಜಿನ ರಂಗ ಅಧ್ಯಯನ ಕೇಂದ್ರದ ಎಲ್.ಸಿ .ಐ.ಆರ್. ರಂಗಮಂದಿರದಲ್ಲಿ ಜರಗಿತು.

ಯಥಾರ್ಥ್ ಸೋಶಿಯಲ್ ಸ್ಥಾಪಕ ಈಶ್ವರ್ ಪ್ರಸಾದ್ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಕಿಶೋರ ರಂಗ ಪಯಣದಲ್ಲಿ ಮಕ್ಕಳ ಉತ್ಸಾಹದ ಬಗ್ಗೆ ಮತ್ತು ಇದರ ಹಿಂದಿರುವ ಕಲಾಭಿ ತಂಡದ ಪ್ರಯತ್ನದ ಬಗ್ಗೆ ಪ್ರಶಂಸಿದರು. ನಾಟ್ಯ, ನಾಟಕ, ಯಕ್ಷಗಾನ ಎಲ್ಲವನ್ನು ಮುನ್ನಡೆಸುತ್ತಿರುವ ಕಲಾಭಿ ಮುಂದಕ್ಕೂ ಹೀಗೆ ಉಜ್ವಲವಾಗಿ ಬೆಳಗಲಿ ಎಂದು ಹಾರೈಸಿದರು.

ಮುಖ್ಯ ಅತಿಥಿ ಮಂಗಳೂರು ದಕ್ಷಿಣ ಉಪವಿಭಾಗ ಎಸಿಪಿ ವಿಜಯಕ್ರಾಂತಿ, ಅತಿಥಿ ರೆ. ಫಾ. ಮೆಲ್ವಿನ್ ಮಾತನಾಡಿದರು.




ಕಲಾಬಿ 5ನೇ ವರ್ಷದ ಸಂವತ್ಸರದ ಸಂಭ್ರಮದ ಸಲುವಾಗಿ, ಕಲಾ ಕ್ಷೇತ್ರದಲ್ಲಿ ಸಾಧನೆಗೈಯುತ್ತಿರುವ ಕಲಾವಿದರನ್ನು ಗುರುತಿಸಿ ಗೌರವಿಸುವ ನಿಟ್ಟಿನಲ್ಲಿ ಕಲಾಭಿ ಯುವ ಪುರಸ್ಕಾರ 2026 ಪ್ರಶಸ್ತಿಯನ್ನು ರಕ್ಷ ಪೂಜಾರಿ ಅವರಿಗೆ ನೀಡಿ ಗೌರವಿಸಲಾಯಿತು.

ಕಲಾಬಿಯ ಪೋಷಕಾಧ್ಯಕ್ಷ ಮಹೇಶ್ ಕಾಮತ್ ನಿರೂಪಿಸಿದರು, ಭಾರ್ಗವಿ ನಾಯಕ್ ಪ್ರಾಸ್ತಾವಿಸಿದರು. ಸುರೇಶ್ ಬಿ. ವರ್ಕಾಡಿ ಸ್ವಾಗತಿಸಿ, ಉಜ್ವಲ್ ಯು.ವಿ. ವಂದಿಸಿದರು.

ಕಲಾಬಿ ಚಿಲ್ಡ್ರನ್ಸ್ ಥಿಯೇಟರ್ ಪ್ರಸ್ತುತಪಡಿಸಿದ, ಭುವನ್ ಮಣಿಪಾಲ್ ನಿರ್ದೇಶನದ ಅಲ್ಲಾವುದ್ದೀನ್ ಮಾಯಾ ದೀಪ ಧಮನಿ ಕುಂದಾಪುರ ಪ್ರಸ್ತುತಪಡಿಸುತ್ತಿರುವ ಶ್ರೀ ರೋಹಿತ್ ಬೈಕಾಡಿ ನಿರ್ದೇಶನದ ಸೂರ್ಯ ಚಂದ್ರ ನಾಟಕ ಪ್ರದರ್ಶನಗೊಂಡಿತು. ಸಮಾರೋಪ ಸಮಾರಂಭದಲ್ಲಿ ನಿರ್ದೇಶಕ ವಿಜಯ್ ಕುಮಾರ್ ಕೋಡಿಯಾಲ್ ಬೈಲ್, ಸಚಿತ ನಂದಗೋಪಾಲ್, ಉದ್ಯಮಿ ಮಹೇಶ್ ಕಾಮತ್, ಉಪನ್ಯಾಸಕಿ ದೀಪ್ತಿ ಶೆಟ್ಟಿ ಅವರ ಉಪಸ್ಥಿತಿಯಲ್ಲಿ ಶರಣ್ ಚಿಲಿಂಬಿ ಅವರ ನಿರ್ವಹಣೆಯಲ್ಲಿ, ಎಜುಕೇಶನ್ ಮತ್ತು ಕೋ-ಕರಿಕ್ಯುಲರ್ಮತ್ತು ಮಗುವಿನ ಜೀವನದ ಮೇಲೆ ಕಲೆಯ ಪ್ರಭಾವ ವಿಷಯದ ಮೇಲೆ ಮಂಥನ ಎಂಬ ಚರ್ಚೆಯು ನಡೆಯಿತು.ಅರಳು 2026 ಕಾರ್ಯಾಗಾರದ ಮಕ್ಕಳಿಂದ ಚರಿತ್ ಸುವರ್ಣ ನಿರ್ದೇಶನದ ಐ ಶಭಾಷ್ ನಾಟಕವು ನಡೆಯಿತು.

Udayavani 04-05-2026

## ವಿಂಚ್ಣಾರ್ ಮೊತಿಯಾಂ ಕಾರ್ಯಕ್ರಮಕ್ಕೆ ಚಾಲನೆ

# ಓದುಗರಿಂದ ಸಾಹಿತ್ಯ ಬೆಳೆಯುತ್ತದೆ: ಡಾ| ಪ್ರವೀಣ್ ಮಾರ್ಟಿಸ್

**ಮಹಾನಗರ, ಮೇ 3:** ಯಾವುದೇ ಭಾಷೆಯ ಸಾಹಿತ್ಯದ ಉಳಿವು ಹಾಗೂ ಬೆಳವಣಿಗೆ ಓದುಗರ ಮೇಲೆ ಅವಲಂಭಿಸಿದೆ. ಕೊಂಕಣಿ ಭಾಷೆಯಲ್ಲಿ ಕ್ಷೀಣಿಸುತ್ತಿರುವ ವಾಚನ ಹವ್ಯಾಸಕ್ಕೆ ಜೀವ ತುಂಬುವ ನಿಟ್ಟಿನಲ್ಲಿ, ಹೊಸ ಮಾಧ್ಯಮದ ಮೂಲಕ ವಿಂಚ್ಣಾರ್ ಮೊತಿಯಾಂ(ಆಯ್ದ ಮುತ್ತುಗಳು) ಎಂಬ ವಿಡಿಯೊ ಸರಣಿ ಕಾರ್ಯಕ್ರಮವನ್ನು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕೊಂಕಣಿ ಸಂಸ್ಥೆ ಆರಂಭಿಸುತ್ತಿದೆ ಎಂದು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ| ಪ್ರವೀಣ್ ಮಾರ್ಟಿಸ್ ಹೇಳಿದರು.

ಕೊಂಕಣಿ ಸಾಹಿತ್ಯದ ಮೇರು ಕೃತಿಗಳನ್ನು ಓದುಗರಿಗೆ ಪರಿಚಯಿಸುವ ನಿಟ್ಟಿನಲ್ಲಿ ಕೊಂಕಣಿ ಸಂಸ್ಥೆ ತಯಾರಿಸಿದ ವಿಂಚ್ಣಾರ್



ಮೊತಿಯಾಂ ವಿಡಿಯೊ ಸರಣಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 44 ವರ್ಷಗಳಿಂದ ಕೊಂಕಣಿ ಸಂಸ್ಥೆ ಅಮರ್ ಕೊಂಕಣಿ ಎಂಬ ಸಂಶೋಧನಾ ಪತ್ರಿಕೆಯನ್ನೂ ನಡೆಸಿಕೊಂಡು ಬಂದಿದೆ. ಡಾ| ವಿಜಯ್ ಡಿ'ಸೊಜಾ ಅವರ ನೇತೃತ್ವದಲ್ಲಿ ಸದ್ಯದಲ್ಲೆ ಕೊಂಕಣಿ ಭಾಷಾ ಸಂಶೊಧನಾ ಕಾರ್ಯ ಆರಂಭವಾಗಲಿದೆ ಎಂದರು.

ಕೊಂಕಣಿ ಸಂಸ್ಥೆಯ ಸಲಹೆಗಾರ ಡಾ| ಆಲ್ವಿನ್ ಡೆಸಾ ಕಾರ್ಯಮ್ರಮದ ರೂಪು-ರೇಷೆ ಕುರಿತು ಪರಿಚಯ ನೀಡಿದರು. ಸಾಹಿತಿ ಎಚ್. ಎಂ. ಪೆರ್ನಾಲ್ ಸ್ವಾಗತಿಸಿ ನಿರೂಪಿಸಿದರು. ಪಿಂಟೊ ವಾಮಂಜೂರು ವಂದಿಸಿದರು. ವನಿತಾ ಸಹಕರಿಸಿದರು.

*Prajavani 05-05-2026*

# ಸಾಹಿತ್ಯ ಚರ್ಚೆಗೆ ವಿಂಚ್ಣಾರ್ ಮೊತಿಯಾಂ

ಪ್ರಜಾವಾಣಿ ವಾರ್ತೆ

ಮಂಗಳೂರು: ಭಾಷಾ ಸಾಹಿತ್ಯದ ಅಳಿವು-ಉಳಿವು ಓದುಗರನ್ನು ಅವಲಂಬಿಸಿದೆ. ಕೊಂಕಣಿಯಲ್ಲಿ ಕ್ಷೀಣಿಸುತ್ತಿರುವ ಓದುವ ಹವ್ಯಾಸಕ್ಕೆ ಜೀವ ತುಂಬಲು ನವೀನ ಮಾಧ್ಯಮಗಳಿಗೆ ಮೊರೆಹೋಗಬೇಕಾಗಿದೆ ಎಂದು ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್ ಹೇಳಿದರು.

ಕೊಂಕಣಿ ಸಾಹಿತ್ಯದ ಮೇರು ಕೃತಿಗಳನ್ನು ಓದುಗರಿಗೆ ಪರಿಚಯಿಸುವುದಕ್ಕಾಗಿ ಕೊಂಕಣಿ ಸಂಸ್ಥೆ ಆರಂಭಿಸಿರುವ ವಿಂಚ್ಣಾರ್ ಮೊತಿಯಾಂ (ಆಯ್ದ ಮುತ್ತುಗಳು) ವಿಡಿಯೊ ಸರಣಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾಲ್ಕೂವರೆ ದಶಕಗಳಿಗೂ ಮೀರಿ ಕೊಂಕಣಿ ಭಾಷೆ ಮತ್ತು ಸಾಹಿತ್ಯದ ಸಂವರ್ಧನೆಗಾಗಿ ದುಡಿಯುತ್ತಿರುವ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕೊಂಕಣಿ ಸಂಸ್ಥೆ ಕಳೆದ ವರ್ಷದಿಂದ ಬೊಲ್ಕಾಂವ್ (ಬಾಲ್ಕನಿ) ಎಂಬ ವಿನೂತನ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ವಿಂಚ್ಣಾರ್ ಮೊತಿಯಾಂ ಕಾರ್ಯಕ್ರಮದಲ್ಲಿ ಓದುಗರು ತಮಗೆ ಇಷ್ಟವಾದ ಸಾಹಿತ್ಯ ಕೃತಿಯ ಬಗ್ಗೆ ಮಾತನಾಡುತ್ತಾರೆ. ಕಾರ್ಯಕ್ರಮ ತಿಂಗಳ ಮೊದಲ ಹಾಗೂ ಮೂರನೇ ಶನಿವಾರ ವಿಶ್ವವಿದ್ಯಾಲಯದ ಯೂ ಟ್ಯೂಬ್ ಚ್ಯಾನೆಲ್‌ನಲ್ಲಿ ಪ್ರಸಾರವಾಗಲಿದೆ ಎಂದು ಅವರು ತಿಳಿಸಿದರು.

ಅಮರ್ ಕೊಂಕಣಿ ಎಂಬ ಸಂಶೋಧನಾ ಪತ್ರಿಕೆಯನ್ನೂ ಪ್ರಕಟಿಸುತ್ತಿರುವ ಸಂಸ್ಥೆ ವಿಜಯ್ ಡಿ ಸೋಜಾ ಅವರ ನೇತೃತ್ವದಲ್ಲಿ ಸದ್ಯದಲ್ಲೇ ಕೊಂಕಣಿ ಭಾಷಾ ಸಂಶೋಧನಾ ಕಾರ್ಯ ಆರಂಸಲಿದೆ ಎಂದು ಮಾರ್ಟಿಸ್ ತಿಳಿಸಿದರು.

ಕೊಂಕಣಿ ಸಂಸ್ಥೆಯ ಸಲಹೆಗಾರ ಆಲ್ವಿನ್ ದೇಸಾ, ಬೊಲ್ಕಾಂವ್ ಸಂಚಾಲಕ ಎಚ್.ಎಂ ಪೆರ್ನಾಲ್, ಕೊಂಕಣಿ ಸಂಸ್ಥೆಯ ಕಾರ್ಯಕ್ರಮ ಸಂಚಾಲಕ ಪಿಂಟೊ ವಾಮಂಜೂರು ಮತ್ತು ವನಿತಾ ಪಾಲ್ಗೊಂಡಿದ್ದರು.



ವಿಂಚ್ಣಾರ್ ಮೊತಿಯಾಂ ಉದ್ಘಾಟಿಸಿ ಫಾ. ಪ್ರವೀಣ್ ಮಾರ್ಟಿಸ್ ಮಾತನಾಡಿದರು. ಎಚ್‌ಎಂ ಪೆರ್ನಾಲ್ ಪಾಲ್ಗೊಂಡಿದ್ದರು

*Samyuktha Karnataka 05-05-2026*

# ಓದುಗರಿಂದ ಸಾಹಿತ್ಯ ಉಳಿಯುತ್ತದೆ: ಡಾ.ಫಾ.ಪ್ರವೀಣ್

ಸಂ.ಕ.ಸಮಾಚಾರ, ಮಂಗಳೂರು

ಯಾವುದೇ ಭಾಷೆಯ ಸಾಹಿತ್ಯದ ಉಳಿವು ಓದುಗರ ಮೇಲೆ ಅವಲಂಭಿಸಿದೆ ಎಂದು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ಫಾ.ಪ್ರವೀಣ್ ಮಾರ್ಟಿಸ್.ಜೆ.ಸ. ಹೇಳಿದರು.

ಅವರು ಇಂದು ನಗರದ ಸಂತ ಅಲೋಶಿಯಸ್ ವಿಶ್ವವಿದ್ಯಾಲಯ ಕೊಂಕಣಿ ಸಂಸ್ಥೆಯಲ್ಲಿ 'ವಿಂಚ್ಣಾರ್ ಮೊತಿಯಾಂ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೊಂಕಣಿ ಭಾಷೆಯಲ್ಲಿ ಕ್ಷೀಣಿಸುತ್ತಿರುವ ವಾಚನ ಹವ್ಯಾಸಕ್ಕೆ ಜೀವ ತುಂಬುವ ನಿಟ್ಟಿನಲ್ಲಿ, ಹೊಸ ಮಾಧ್ಯಮದ ಮೂಲಕ ವಿಂಚ್ಣಾರ್ ಮೊತಿಯಾಂ(ಆಯ್ದ ಮುತ್ತುಗಳು) ಎಂಬ ವಿಡಿಯೊ ಸರಣಿ ಕಾರ್ಯಕ್ರಮವನ್ನು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕೊಂಕಣಿ ಸಂಸ್ಥೆ ಆರಂಭಿಸುತ್ತಿದೆ. ಕಳೆದ 46 ವರ್ಷಗಳಿಂದ ಕೊಂಕಣಿ ಭಾಷೆ ಮತ್ತು ಸಾಹಿತ್ಯದ ಸಂವರ್ಧನೆಗಾಗಿ ದುಡಿಯುತ್ತಿರುವ ಸಂತ ಅಲೊಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕೊಂಕಣಿ ಸಂಸ್ಥೆ ಕಳೆದ ಒಂದು ವರ್ಷದಿಂದ ಬೊಲ್ಕಾಂವ್ (ಬಾಲ್ಕನಿ) ಎಂಬ ವಿನೂತನ ಕಾರ್ಯಕ್ರವನ್ನು ಆಯೋಜಿಸುತ್ತಾ ಬಂದಿದ್ದು, ಪ್ರಸ್ತುತ ವಿಂಚ್ಣಾರ್ ಮೊತಿಯಾಂ ಕಾರ್ಯಕ್ರಮದಲ್ಲಿ ಓದುಗರು ತಮಗೆ ಇಷ್ಟವಾದ ಸಾಹಿತ್ಯ ಕೃತಿಯ ಬಗ್ಗೆ ಮಾತನಾಡುತ್ತಾರೆ. ಈ ಕಾರ್ಯಕ್ರಮ ತಿಂಗಳ ಪ್ರತೀ ಮೊದಲ ಹಾಗೂ ಮೂರನೇ ಶನಿವಾರ ವಿಶ್ವವಿದ್ಯಾಲಯದ ಯೂ ಟ್ಯೂಬ್ ಚ್ಯಾನೆಲ್‌ನಲ್ಲಿ ಪ್ರಸಾರವಾಗುತ್ತದೆ ಮತ್ತು ಅಲ್ಲಿ ಅಧ್ಯಯನಕ್ಕೆ ಲಭ್ಯವಿದೆ. ಇದರಿಂದ ಕೊಂಕಣಿ ಸಾಹಿತ್ಯ ಅಧ್ಯಯನ ಮಾಡುವ ವಿದ್ಯಾರ್ಥಿ ಮತ್ತು ಬೋಧಿಸುವ ಶಿಕ್ಷಕರಿಗೂ ಪ್ರಯೋಜನವಾಗಲಿದೆ ಎಂದರು.

ಕಳೆದ 44 ವರ್ಷಗಳಿಂದ ಕೊಂಕಣಿ ಸಂಸ್ಥೆ ಅಮರ್ ಕೊಂಕಣಿ ಎಂಬ ಸಂಶೋಧನಾ ಪತ್ರಿಕೆಯನ್ನೂ ನಡೆಸಿಕೊಂಡು ಬಂದಿದ್ದು, ಡಾ. ಫಾ. ವಿಜಯ್ ಡಿ'ಸೋಜಾ ಅವರ ನೇತೃತ್ವದಲ್ಲಿ ಸದ್ಯದಲ್ಲಿ ಕೊಂಕಣಿ ಭಾಷಾ ಸಂಶೊಧನಾ ಕಾರ್ಯ ಆರಂಭವಾಗಲಿದೆ ಎಂದು ತಿಳಿಸಿದರು.

ಡಾ.ಮಾರ್ಟಿಸ್ ಕೊಂಕಣಿ ಸಾಹಿತ್ಯದ ಮೇರು ಕೃತಿಗಳನ್ನು ಓದುಗರಿಗೆ ಪರಿಚಯಿಸುವ ನಿಟ್ಟಿನಲ್ಲಿ ತಯಾರಿಸಿಸ ಕೊಂಕಣಿ ಸಂಸ್ಥೆ ತಯಾರಿಸಿದ ವಿಂಚ್ಣಾರ್ ಮೊತಿಯಾಂ (ಆಯ್ದ ಮುತ್ತುಗಳು) ವಿಡಿಯೊ ಸರಣಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತಿದ್ದರು.

ಸರಣಿ ಕಾರ್ಯಕ್ರಮದ ರೂವಾರಿ, ಕೊಂಕಣಿ ಸಂಸ್ಥೆಯ ಸಲಹೆಗಾರ ಡಾ. ಆಲ್ವಿನ್ ಡೆಸಾ ವಿಂಚ್ಣಾರ್ ಮೊತಿಯಾಂ ಕಾರ್ಯಕ್ರಮದ ರೂಪು-ರೇಷೆ ಮತ್ತು ವಿನ್ಯಾಸದ ಕುರಿತು ಕಿರು ಪರಿಚಯ ನೀಡಿದರು. ಈ ಕಾರ್ಯಕ್ರಮ ಸರಣಿಯಿಂದ ವಾಚನ ಹವ್ಯಾಸ ಬೆಳೆಯುವ ಭರವಸೆಯಿದೆ ಎಂದ ಅವರು ಇದೇ ಮಾದರಿಯಲ್ಲಿ ಸಾಹಿತ್ಯ ವಿಮರ್ಶೆಯ ಸಿದ್ಧಾಂತಗಳನ್ನು ಓದುಗರಿಗೆ ಸರಳವಾಗಿ ಹೇಳುವ ಸರಣಿ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದು, ಸದ್ಯದಲ್ಲೇ ಪ್ರಸಾರ ಮಾಡಲಾಗುವುದು ಎಂದು ಹೇಳಿದರು.

ಬೊಲ್ಕಾಂವ್ ಕಾರ್ಯಕ್ರಮದ ಸಂಚಾಲಕ ಸಾಹಿತಿ, ಪತ್ರಕರ್ತ ಎಚ್.ಎಮ್. ಪೆರ್ನಾಲ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕೊಂಕಣಿ ಸಂಸ್ಥೆಯ ಕಾರ್ಯಕ್ರಮ ಸಂಚಾಲಕ ಪಿಂಟೊ ವಾಮಂಜೂರು ವಂದಿಸಿದರು. ವನಿತಾ ಸಹಕರಿಸಿದರು.



Deccan Herald 05-05-2026

# 'Survival of any literature depends on its reader'

MANGALURU, DHNS

The survival of any language's literature depends on its readers, said St Aloysius Deemed-to-be-University Vice Chancellor Fr Praveen Martis.

He was speaking after inaugurating the new video series 'Vinchnar Motiyam' (Selected Pearls) at the University's Konkani Institute.

The initiative aims to revive the declining reading habit in Konkani by introducing a new medium. Through this series, readers will share their reflections on their favorite literary works. Episodes will be broadcast on the University's official YouTube channel on the first and third Saturday of every month, serving as a valuable resource for students and teachers engaged in Konkani literary studies, he said.

For over 46 years, the Konkani Institute has been dedicated to the promotion of Konkani language and literature. In the past year, it has successfully hosted Bolkawv (Balcony), a unique program that engaged audiences in literary discussions. The new Vinchnar Motiyam series builds on this legacy, offering readers a platform to connect with classic works, he added.

Fr Martis also highlighted that the Institute had been publishing the research journal Amar Konkani for the past 44 years. "Under the leadership of Fr (Dr) Vijay D'Souza, a new Konkani language research project is set to begin shortly."

Advisor to Konkani Institute Alwyn D'Souza introduced the programme's framework. He explained the design and vision behind Vinchnar Motiyam.

He expressed confidence that the series would nurture a culture of reading.

He said another upcoming series would simplify literary criticism theories for readers.

The inaugural event was hosted by noted writer and journalist H M Pernal. Pinto Vamanjoor was also present.



St Aloysius Deemed-to-be-University Vice Chancellor Fr Praveen Martis speaks after inaugurating the new video series 'Vinchnar Motiyam' (Selected Pearls) at the University's Konkani Institute in Mangaluru recently.

*News Trail 05-05-2026*

# St Aloysius University launches 'Vinchnar Motiyam' series

**NT Correspondent**
Mangaluru



"The survival of any language's literature depends on its readers," remarked Dr. Fr. Praveen Martis, Vice-Chancellor of St Aloysius University, as he inaugurated the new video series Vinchnar Motiyam (Selected Pearls) at the University's Konkani Institute.

The initiative aims to revive the declining reading habit in Konkani by introducing a new medium. Through this series, readers will share their reflections on their favorite literary works. Episodes will be broadcast on the University's official YouTube channel on the first and third Saturday of every month, serving as a valuable resource for students and teachers engaged in Konkani literary studies.

For over 46 years, the Konkani Institute has been dedicated to the promotion of Konkani language and literature. In the past year, it has successfully hosted Bolkawv (Balcony), a unique program that engaged audiences in literary discussions. The new Vinchnar Motiyam series builds on this legacy, offering readers a platform to connect with classic works.

Dr. Martis also highlighted that the Institute has been publishing the research journal Amar Konkani for the past 44 years. Under the leadership of Dr. Fr. Vijay D'Souza, a new Konkani language research project is set to begin shortly.

Introducing the program's framework, Dr. Alwyn D'Souza, advisor to the Konkani Institute, explained the design and vision behind Vinchnar Motiyam. He expressed confidence that the series would nurture a culture of reading. He further revealed that another upcoming series will simplify literary criticism theories for readers.

The inaugural event was hosted by noted writer and journalist H. M. Pernal, who welcomed the gathering and anchored the program. Pinto Vamanjoor proposed the vote of thanks, with assistance from Ms. Vanitha.

*Times of India 05-05-2026*

# Readers sustain language and literature, says Aloysius vice-chancellor

TIMES NEWS NETWORK

**Mangaluru:** The survival of any language's literature depends on its readers, said Fr Praveen Martis, vice chancellor of St Aloysius (deemed to be) university, as he inaugurated the new video series Vinchnar Motiyam (selected pearls) at the university's Konkani Institute.

The initiative aims to revive the declining reading habit in Konkani. Through this series, readers will share their reflections on their favourite literary works.

Episodes will be broadcast on the university's official YouTube channel on the first and third Saturday, every month, serving as a valuable resource for students and teachers engaged in Konkani literary studies.

For over 46 years, the Konkani Institute is dedicated to promoting Konkani language and literature.

In the past year, it successfully hosted Bolkawv (Balcony), a unique programme that engaged audiences in literary discussions.

The new Vinchnar Motiyam series builds on this legacy, offering readers a platform to connect with classic works.

Fr Martis also highlighted that the institute has been publishing research journal Amar Konkani for the past 44 years. Under the leadership of Fr Vijay D'Souza, a new Konkani language research project is set to begin shortly.

Introducing the programme's framework, Alwyn D'Souza, adviser to the Konkani Institute, explained the design and vision behind Vinchnar Motiyam.

He expressed confidence that the series would nurture reading habits, and revealed that another series will simplify literary criticism theories for readers.

The event was hosted by noted writer and journalist HM Pernal.

*Indian Express 05-05-2026*

# St Aloysius University Konkani Institute launches 'Vinchnar Motiyam' series

**ENS** @Mangaluru

"THE survival of any language's literature depends on its readers," remarked Fr. Praveen Martis, Vice-Chancellor of St Aloysius University, as he inaugurated the new video series Vinchnar Motiyam (Selected Pearls) at the University's Konkani Institute.

The initiative aims to revive the declining reading habit in Konkani by introducing a new medium. Through this series, readers will share their reflections on their favourite literary works. Episodes will be broadcast on the University's official YouTube channel on the first and third Saturdays of every month, serving as a valuable resource for students and teachers engaged in Konkani literary studies.

For more than 46 years, the Konkani Institute has worked to promote the Konkani language and literature. Over the past year, it has hosted Bolkawv (Balcony), a distinctive programme that engaged audiences in literary discussions. Building on this legacy, the new Vinchnar Motiyam series offers readers a platform to connect with classic works.

Dr Martis also highlighted that the Institute has been publishing the research journal Amar Konkani for the past 44 years. Under the leadership of Fr. Vijay D'Souza, a new Konkani language research project is set to begin shortly.

Introducing the program's framework, Dr Alwyn D'Souza, advisor to the Konkani Institute, explained the design and vision behind Vinchnar Motiyam. He expressed confidence that the series would nurture a culture of reading. He further revealed that another upcoming series will simplify literary criticism theories for readers.

*Udayavani 06-05-2026*

# ಕಿಶೋರ ರಂಗಪಯಣ 2026ಕ್ಕೆ ತೆರೆ



**ಮಹಾನಗರ, ಮೇ 5:** ಕಲಾಭಿ ವತಿಯಿಂದ, ರಂಗ ಅಧ್ಯಯನ ಕೇಂದ್ರ, ಸಂತ ಅಲೋಶಿಯಸ್ ಸಹಯೋಗದಲ್ಲಿ ಆಯೋಜಿಸಲಾದ ಮೂರು ದಿನಗಳ ಮಕ್ಕಳ ರಂಗೋತ್ಸವ 'ಕಿಶೋರ ರಂಗಪಯಣ-2026' ಸಮಾಪ್ತಿಯಾಯಿತು.

ಅಂತಿಮ ದಿನದ ಪ್ರಮುಖ ಆಕರ್ಷಣೆಯಾಗಿ 'ಮಂಥನ-ಶಿಕ್ಷಣ, ಕಲೆ ಮತ್ತು ಮಗು' ವಿಷಯದ ಸಂವಾದ ಕಾರ್ಯಕ್ರಮ ಜರಗಿತು. ಇಂದಿನ ಪೀಳಿಗೆ, ಪೋಷಕರ ಪಾತ್ರ, ಹಾಗೂ ಶಿಕ್ಷಣ ವ್ಯವಸ್ಥೆಯ ಬದಲಾವಣೆಗಳ ಕುರಿತು ಚರ್ಚೆ ನಡೆಯಿತು. ಸಂವಾದದಲ್ಲಿ ಲೇಖಕ ಹಾಗೂ ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್ ಬೈಲ್, ಮೈಟ್ ಮೂಡುಬಿದಿರೆ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕಿ ಡಾ| ದೀಪ್ತಿ ಶೆಟ್ಟಿ, ಉದ್ಯಮಿ ಮತ್ತು ರಾಷ್ಟ್ರೀಯ ತರಬೇತುದಾರ ಮಹೇಶ್ ಕಾಮತ್, ಶಿಕ್ಷಣ ತಜ್ಞೆ ಸಚಿತಾ ನಂದಗೋಪಾಲ್ ಅನುಭವ ಹಂಚಿಕೊಂಡರು.

ಯುವ ಐಕಾನ್ ಶರಣ್ ಚಿಲಿಂಬಿ ಸಂವಾದವನ್ನು ಸಂಯೋಜಿಸಿದರು. ಈ ಸಂವಾದದಲ್ಲಿ ಪಠ್ಯೇತರ ಚಟುವಟಿಕೆಗಳ ಮಹತ್ವ ವಿಶೇಷವಾಗಿ ರಂಗಕಲೆ ಮಕ್ಕಳ ಆತ್ಮವಿಶ್ವಾಸ, ಸೃಜನಶೀಲತೆ ಮತ್ತು ಭಾವನಾತ್ಮಕ ಬೆಳವಣಿಗೆಗೆ ಹೇಗೆ ಪೂರಕವಾಗುತ್ತದೆ ಎಂಬುದನ್ನು ಹೇಳಲಾಯಿತು.

ಕಾರ್ಯಕ್ರಮದ ಸಮಾರೋಪವಾಗಿ 'ಐ ಶಭಾಶ್' ನಾಟಕವನ್ನು ಚರಿತ್ ಸುವರ್ಣ ಅವರ ನಿರ್ದೇಶನದಲ್ಲಿ ಮಕ್ಕಳಿಂದ ಪ್ರದರ್ಶಿಸಲಾಯಿತು.

*Udayavani 06-05-2026*

# ಗ್ಲೋಬಲ್ ಡಿಗ್ರೀಸ್ ಮಂಗಳೂರು ಕಾರ್ಯಾರಂಭ

## ▶ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವವರಿಗೆ ಮಾರ್ಗದರ್ಶನ

**ಮಹಾನಗರ, ಮೇ 5:** ನಗರದ ಎಂ.ಜಿ. ರಸ್ತೆಯ ಮಾನಸ ಟವರ್ಸ್‌ನ ಮೊದಲನೇ ಮಹಡಿಯಲ್ಲಿ ಆರಂಭಗೊಂಡ ಗ್ಲೋಬಲ್ ಡಿಗ್ರೀಸ್ ಮಂಗಳೂರು ಸಂಸ್ಥೆಯ ಉದ್ಘಾಟನ ಸಮಾರಂಭ ಮಂಗಳವಾರ ನಗರದ ಎ.ಜೆ. ಗ್ರ್ಯಾಂಡ್ ಹೊಟೇಲ್‌ನಲ್ಲಿ ನೆರವೇರಿತು.

ನೂತನ ಸಂಸ್ಥೆ ಉದ್ಘಾಟಿಸಿದ ಸಂತ ಅಲೋಶಿಯಸ್ ವಿವಿ ಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಮಾತನಾಡಿ, ಕರಾವಳಿ ಭಾಗದಲ್ಲಿ ಹಲವು ಶಿಕ್ಷಣ ಸಂಸ್ಥೆಗಳಿದ್ದು, ರಾಷ್ಟ್ರದಲ್ಲೇ ಹೆಸರು ಪಡೆದುಕೊಂಡಿದ್ದೇವೆ. ಇದೀಗ ಗ್ಲೋಬಲ್ ಡಿಗ್ರೀಸ್ ಮಂಗಳೂರು ಸಂಸ್ಥೆಯು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಮೂಲಕ ಅವರ ಭವಿಷ್ಯ ರೂಪಿಸಲಿದೆ ಎಂದು ಹೇಳಿದರು.

ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯು ಸುಧಾರಣೆ ಹಂತದಲ್ಲಿದ್ದು ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ತರಬೇತಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ನೂತನ ಸಂಸ್ಥೆಯು ವಿದ್ಯಾರ್ಥಿಗಳು ವಿದೇಶದಲ್ಲಿ ಕಲಿಯಲು ಬೇಕಾದ ಸಲಹೆಯನ್ನು ಆರಂಭದಿಂದ ಕೊನೆಯವರೆಗೆ ನೀಡುತ್ತದೆ ಎಂದರು.

ಸಂತ ಅಲೋಶಿಯಸ್ ವಿ.ವಿ. ರಿಜಿಸ್ಟ್ರಾರ್ ರೊನಾಲ್ಡ್ ನಜರತ್ ಮಾತನಾಡಿ, ಭಾರತ ಶೈಕ್ಷಣಿಕ ಕೇಂದ್ರವಾಗಿದ್ದು ವಿದೇಶದಲ್ಲಿ ಮಕ್ಕಳ ಕನಸು ನನಸಾಗಿಸಲು ಈ ಸಂಸ್ಥೆ ನೆರವಾಗುತ್ತದೆ ಎಂದು ಹೇಳಿ ಸಂಸ್ಥೆಗೆ ಶುಭಕೋರಿದರು.

ಎಂಬಿಟಿ ಮಂಗಳೂರು ಕ್ಯಾಂಪಸ್‌ನ ಐಕ್ಯಾಪ್ ನಿರ್ದೇಶಕ ಡಾ| ಹರೀಶ್ ಎಚ್.ಕೆ. ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹ ಸಂಸ್ಥಾಪಕಿ ಶಿಲ್ಪಾ ಶೆಟ್ಟಿ ಭಾಗವಹಿಸಿದ್ದರು.

ಇದೇ ವೇಳೆ ಸಂಸ್ಥೆಯ ಲೋಗೋ ಅನಾವರಣಗೊಳಿಸಲಾಯಿತು. ಸಂಸ್ಥೆಯ ಸಹ ಸಂಸ್ಥಾಪಕಿ ದೀಪಾ ಪ್ರಭು ಸ್ವಾಗತಿಸಿದರು. ವ್ಯವಹಾರ ಅಭಿವೃದ್ಧಿ ಅಧಿಕಾರಿ ದಿಯಾ ಅಜಿತ್ ವಂದಿಸಿ, ವಿದ್ಯಾ ಅವರು ನಿರೂಪಿಸಿದರು.



### ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ

ಸಂಸ್ಥೆಯ ಸಹ ಸಂಸ್ಥಾಪಕ ಶಿಜೋಮೋನ್ ಯೇಸುದಾಸ್ ಪ್ರಾಸ್ತಾವಿಸಿ, ಗ್ಲೋಬಲ್ ಡಿಗ್ರೀಸ್ ಮಂಗಳೂರು ಸಂಸ್ಥೆಯು ದೇಶಾದ್ಯಂತ 18 ಶಾಖೆಗಳನ್ನು ಹೊಂದಿದೆ. ಯುಎಸ್‌ಎ, ಯುಕೆ, ಆಸ್ಟ್ರೇಲಿಯಾ, ಕೆನಡಾ, ಜರ್ಮನಿ, ಫ್ರಾನ್ಸ್, ಐರ್ಲೆಂಡ್ ಹಾಗೂ ನ್ಯೂಜಿಲೆಂಡ್ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ನೀಡಲಾಗುತ್ತದೆ. ಕೋರ್ಸ್ ಮತ್ತು ವಿಶ್ವವಿದ್ಯಾಲಯ ಆಯ್ಕೆ, ಪ್ರವೇಶ ಪ್ರಕ್ರಿಯೆ, ವಿದ್ಯಾರ್ಥಿವೇತನ ಹಾಗೂ ವೀಸಾ ಅರ್ಜಿಗಳಿಗೂ ಸಹಾಯ ಒದಗಿಸಲಿದೆ. ಎಐ ಆಧಾರಿತ ಮಾಕ್ ಸಂದರ್ಶನ ತರಬೇತಿ, ಉಚಿತ ಐಇಎಲ್‌ಟಿಎಸ್ ತರಬೇತಿ ನೀಡುತ್ತದೆ ಎಂದು ವಿವರಿಸಿದರು.

---

*Vijayakarnataka 07-05-2026*

# 10ರಂದು ಕೃತಿ ಬಿಡುಗಡೆ

**ಮಂಗಳೂರು:** ಖ್ಯಾತ ಸಾಹಿತಿ ವಲ್ಲಿ ವಗ್ಗ ಅವರು ಬರೆದಿರುವ 'ವಿಂಚ್ನಾರ್ ಕಾಣಿಯೊ' ಪುಸ್ತಕದ ಲೋಕಾರ್ಪಣೆ ಸಮಾರಂಭ ಮೇ 10ರಂದು ಸಂಜೆ 5ಕ್ಕೆ ಸೈಂಟ್ ಅಲೋಶಿಯಸ್ ವಿಶ್ವವಿದ್ಯಾಲಯದ ಸಹೋದಯ ಸಭಾಂಗಣದಲ್ಲಿ ನಡೆಯಲಿದೆ.

ಈ ಸಮಾರಂಭದಲ್ಲಿ ಸೈಂಟ್ ಅಲೋಶಿಯಸ್ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಪ್ರವೀಣ್ ಮಾರ್ಟಿಸ್ ಮತ್ತು ಕೊಂಕಣಿ ಸಲಹಾ ಸಮಿತಿ, ಸಾಹಿತ್ಯ ಅಕಾಡೆಮಿ, ಹೊಸ ದಿಲ್ಲಿ ಸಂಚಾಲಕ ಮೆಲ್ವಿನ್ ರೊಡ್ರಿಗಸ್ ಭಾಗವಹಿಸಲಿದ್ದಾರೆ.

ಈ ಕೃತಿಯು ಮೈಕಲ್ ಡಿಸೋಜ - ವಿಷನ್ ಕೊಂಕಣಿ ಸಂಸ್ಥೆಯಡಿಯಲ್ಲಿ ಲೂರ್ಡ್ಸ್ ಪ್ರಕಾಶನದಿಂದ ಪ್ರಕಟಗೊಂಡಿದೆ.

*Udavavani 11-05-2026*

ಮಹಾನಗರ: ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ, ಕಂಪ್ಯೂಟರ್ ಅನಿಮೇಶನ್ ವಿಭಾಗದ ಹಿರಿಯ ಉಪನ್ಯಾಸಕ ಸಂತೋಷ್ ನೋಟಗಾರ್ ಅವರಿಗೆ, ಮೇ 15ರಿಂದ 17ರ ವರೆಗೆ ತೈವಾನ್‌ನ ಕೌಶಿಯಾಂಗ್‌ನಲ್ಲಿ ನಡೆಯಲಿರುವ ಏಷ್ಯಾ ಪೆಸಿಫಿಕ್ ಸಮ್ಮೇಳನ 2026ರಲ್ಲಿ ಭಾಗವಹಿಸಲು ಪ್ರತಿಷ್ಠಿತ ಸ್ಕಾಲರ್‌ಶಿಪ್ ದೊರೆತಿದೆ. ಈ ಸಮ್ಮೇಳನದಲ್ಲಿ ಅವರು 'ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಮುಕ್ತ ಜ್ಞಾನ ಏಕೀಕರಣ ಮಾದರಿ' ಕುರಿತು ಉಪನ್ಯಾಸ ನೀಡಲಿದ್ದಾರೆ.



*Vijayakarnataka 11-05-2026*

## ಸಂತೋಷ್‌ಗೆ ಪ್ರತಿಷ್ಠಿತ ಸ್ಕಾಲರ್‌ಶಿಪ್

**ಮಂಗಳೂರು:** ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ ಕಂಪ್ಯೂಟರ್ ಆ್ಯನಿಮೇಷನ್ ವಿಭಾಗದ ಹಿರಿಯ ಉಪನ್ಯಾಸಕ ಸಂತೋಷ್ ನೋಟಗಾರ್ ಅವರಿಗೆ 2026ರ ಮೇ 15ರಿಂದ 17ರವರೆಗೆ ತೈವಾನ್‌ನ ಕೌಶಿಯಾಂಗ್‌ನಲ್ಲಿ ನಡೆಯಲಿರುವ ಏಷ್ಯಾ ಫೆಸಿಫಿಕ್ ಸಮ್ಮೇಳನ 2026ರಲ್ಲಿ ಭಾಗವಹಿಸಲು ಪ್ರತಿಷ್ಠಿತ ಸ್ಕಾಲರ್‌ಶಿಪ್ ದೊರೆತಿದೆ. ಈ ಸಮ್ಮೇಳನದಲ್ಲಿ ಅವರು ಸಂತ ಅಲೋಶಿಯಸ್ ವಿವಿ ಮುಕ್ತ. ಜ್ಞಾನ ಏಕೀಕರಣ ಮಾದರಿ ಕುರಿತು ಉಪನ್ಯಾಸ ನೀಡಲಿದ್ದಾರೆ: ಏಷ್ಯಾ ಫೆಸಿಫಿಕ್ ಸಮ್ಮೇಳನ ಸ್ಕಾಲರ್‌ಶಿಪ್ ಅನ್ನು ಭಾರತ ಹಾಗೂ ದಕ್ಷಿಣ ಏಷ್ಯಾ ಪ್ರದೇಶದಿಂದ ಪಡೆಯುತ್ತಿರುವ ಏಕೈಕ ಪ್ರತಿನಿಧಿ ಎಂಬ ಗೌರವವೂ ಅವರಿಗೆ ಲಭಿಸಿದೆ.



*Indian Express 11-05-2026*

## M'lurean chosen for prestigious scholarship

Mangaluru: Santhosh Notagar, a senior faculty member of the Department of Computer Animation, St Aloysius Deemed to be University, has been awarded a prestigious scholarship to attend the Asia Pacific Conference 2026, scheduled to be held in Kaohsiung, Taiwan, from 15 to 17 May 2026. He is also slated to deliver a talk on the St Aloysius University Model for Open Knowledge Integration at the conference. With over 16 years of service in the Department of Computer Animation, Santhosh currently serves as the Head of the Department. In addition, he holds the responsibility of Co-Chair for the International & Domestic Relations Cell. Over the years, he has actively contributed to multiple initiatives in the open knowledge ecosystem, particularly within the Wikipedia community. He is presently serving as the South Asian Ambassador for the Wikipedia Asian Month campaign. Under his guidance, more than 2,000 Wikipedia articles in different languages have been created across South Asia. As part of a Wikimedia Foundation-supported project in the United States, he has also documented over 50 Karnataka folk culture videos and contributed them to Wikimedia Commons. Santhosh's contributions have been recognized through several national and international scholarships and participations. These include the Wikisource Conference held in Bali, Indonesia (2025), the Train the Trainer Scholarship in Cochin (2023), the Advanced Train the Trainer program at IIIT Hyderabad (2025), the Wiki Technology Summit (2024), and the Oral Indic Culture Scholarship programs conducted in Delhi and Bangalore (2024 & 2025).



*Udayavani 11-05-2026*

# ಎಂಸಿಸಿ ಬ್ಯಾಂಕ್‌ನಲ್ಲಿ 114ನೇ ಸಂಸ್ಥಾಪಕರ ದಿನಾಚರಣೆ

**ಮಹಾನಗರ, ಮೇ 10:** ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 114 ನೇ ಸಂಸ್ಥಾಪಕರ ದಿನಾಚರಣೆಯನ್ನು ಆಡಳಿತ ಕಚೇರಿ ಆವರಣದಲ್ಲಿ ಆಚರಿಸಿತು.

ಬ್ಯಾಂಕಿನ ಸಂಸ್ಥಾಪಕರ ದಿ. ಪಿ.ಎಫ್. ಎಕ್ಸ್. ಸಾಲ್ಡಾನ್ಹ ಅವರ ದೂರದೃಷ್ಟಿಯ ಸೇವೆಯನ್ನು ಸ್ಮರಿಸಲಾಯಿತು ಹಾಗೂ ಸಹಕಾರಿ ಕ್ಷೇತ್ರದಲ್ಲಿ ಬ್ಯಾಂಕ್ ಸಾಧಿಸಿರುವ ನಿರಂತರ ಪ್ರಗತಿ ಹಾಗೂ ಸ್ಥೈರ್ಯವನ್ನು ಗೌರವಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಅಧ್ಯಕ್ಷ ಅನಿಲ್ ಲೋಬೊ ಮಾತನಾಡಿ, ಸಂಸ್ಥಾಪಕರ ದೃಷ್ಟಿಕೋನ ಮತ್ತು ಧ್ಯೇಯವನ್ನು ಸ್ಮರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. 2018ರಲ್ಲಿ ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ಅನಂತರ ಬ್ಯಾಂಕ್ ವೃತ್ತಿಪರತೆಯೊಂದಿಗೆ ಗಮನಾರ್ಹ ಬೆಳವಣಿಗೆ ಸಾಧಿಸಿದೆ ಎಂದು ಹೇಳಿದರು. ಬ್ಯಾಂಕಿನ ಪ್ರಗತಿಯನ್ನು ವಿವರಿಸಿದ ಅವರು, 24 ವರ್ಷಗಳ ಬಳಿಕ ಶಾಖೆಗಳ ಸಂಖ್ಯೆ 16ರಿಂದ 21ಕ್ಕೆ ಏರಿಕೆಯಾಗಿದೆ. ಬ್ಯಾಂಕಿನ ಒಟ್ಟು ವ್ಯವಹಾರ 500 ಕೋ.ರೂ.ನಿಂದ 1,525 ಕೋ.ರೂ.ಗೆ ಏರಿಕೆಯಾಗಿದ್ದು ಠೇವಣಿಗಳು 300 ಕೋ.ರೂ.ನಿಂದ 875 ಕೋ. ರೂ. ಹೆಚ್ಚಳವಾಗಿವೆ . ಬ್ಯಾಂಕ್ 13 ಕೋಟಿ ರೂ, ಲಾಭ ದಾಖಲಿಸಿದೆ ಎಂದು ವಿವರಿಸಿದರು.

ಸೈಂಟ್ ಅಲೋಶಿಯಸ್ (ಡೀಮ್ಡ್ ಟು ಬಿ ಯುನಿವರ್ಸಿಟಿ), ಮಂಗಳೂರು ಕುಲಪತಿ ಡಾ| ಪ್ರವೀಣ್ ಮಾರ್ಟಿಸ್ ಮಾತನಾಡಿ, ಅಧ್ಯಕ್ಷ ಅನಿಲ್ ಲೋಬೊ ಅವರ ನಾಯಕತ್ವವನ್ನು ಶ್ಲಾಘಿಸಿ, ಬ್ಯಾಂಕ್ ಕಳೆದ ಕೆಲವು ವರ್ಷಗಳಲ್ಲಿ ಸಾಧಿಸಿರುವ ಪರಿವರ್ತನೆಯನ್ನು ಮೆಚ್ಚಿದರು.



ಕರ್ನಾಟಕ ಬ್ಯಾಂಕ್‌ನ ಮಾಜಿ ಮಹಾಪ್ರಬಂಧಕ ಹಾಗೂ ಮುಖ್ಯ ಅನುಸರಣಾಕಾರಿ ಡಾ| ಮೀರಾ ಅರನ್ಹಾ ಮಂಗಳೂರು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಚನಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷ ರಾಯ್ ಕ್ಯಾಸ್ಟೆಲಿನೋ ಹಾಗೂ ಕೆನರಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಮಾಜಿ ಅಧ್ಯಕ್ಷ ಐಸಾಕ್ ವಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬ್ಯಾಂಕಿನ ಮಹಾಪ್ರಬಂಧಕ ಸುನಿಲ್ ಮಿನೇಜಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹೊಸದಾಗಿ ಅರ್ಹತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಮ್ಯೂರಿಯಲ್ ಮಸ್ಕರೇನ್ಹಸ್ ಹಾಗೂ ಜಾಯ್‌ಸ್ಟನ್ ಡಿ'ಸೋಜಾ ಅವರನ್ನು ಸಮ್ಮಾನಿಸಲಾಯಿತು. ಕೇಂದ್ರ ಸೆಂಟ್ರಲ್ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹೆನ್ರಿ ಮೆಂಡೋನ್ಸಾ (ಎಚ್. ಎಂ. ಪೆರ್ನಾಲ್), ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ರಿಶೆಲ್ ಫೆರ್ನಾಂಡಿಸ್ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ| ಜೋಸೆಫ್ ಲೋಬೊ, ಝೇವಿಯರ್ ಡಿ'ಸೋಜಾ ಮತ್ತು ಪ್ರೇಮ್ ಜೆ. ಮೊರಾಸ್ ಅವರನ್ನು ಗೌರವಿಸಲಾಯಿತು.

ನಿರ್ದೇಶಕರಾದ ರೋಶನ್ ಡಿ'ಸೋಜಾ ಹಾಗೂ ಅನಿಲ್ ಪತ್ರಾವೊ ಅವರನ್ನು ಸಮ್ಮಾನಿಸಲಾಯಿತು. ಬ್ಯಾಂಕಿನ ಹೊಸ ಲೋಗೋ ವಿನ್ಯಾಸಗೊಳಿಸಿದ ಬನ್ನು ಫೆರ್ನಾಂಡಿಸ್ ಹಾಗೂ ವಾಸ್ತುಶಿಲ್ಪಿ ದೀಪಕ್ ಡಿ'ಸೋಜಾ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಆಂಡ್ರೂ ಡಿ'ಸೋಜಾ, ಹೆರಾಲ್ಡ್ ಮೊಂತೇರೊ, ಅನಿಲ್ ಪತ್ರಾವೊ, ಡೇವಿಡ್ ಡಿ'ಸೋಜಾ, ಜೆ.ಪಿ. ರೋಡ್ರಿಗಸ್, ರೋಶನ್ ಡಿ'ಸೋಜಾ, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸುಶಾಂತ್ ಸಾಲ್ಡಾನ್ಹ, ಐರಿನ್ ರೆಬೆಲ್ಲೊ, ಆಲ್ವಿನ್ ಪಿ. ಮೊಂತೇರೊ, ಫೆಲಿಕ್ಸ್ ಡಿಕ್ರೂಜ್, ಡಾ| ಜೆರಾಲ್ಡ್ ಪಿಂಟೊ ಸಿ.ಜಿ. ಪಿಂಟೊ ಉಪಸ್ಥಿತರಿದ್ದರು. ಬ್ಯಾಂಕಿನ ಮಹಾಪ್ರಬಂಧಕ ಸುನಿಲ್ ಮೆನೆಜಸ್ ವಂದಿಸಿದರು. ಜೇಸನ್ ಶಿರ್ತಾಡಿ ನಿರೂಪಿಸಿದರು.

*Prajavani 11-05-2026*

# ಎಂಸಿಸಿ ಬ್ಯಾಂಕ್: ₹13 ಕೋಟಿ ಲಾಭ

## ಸಂಸ್ಥಾಪಕರ ದಿನಾಚರಣೆಯಲ್ಲಿ ಅನಿಲ್ ಲೋಬೊ ಮಾಹಿತಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಆರ್ಥಿಕ ವರ್ಷದಲ್ಲಿ ₹ 13 ಕೋಟಿ ಲಾಭವನ್ನು ಎಂಸಿಸಿ ಬ್ಯಾಂಕ್ ಗಳಿಸಿದೆ. ಒಟ್ಟು ವ್ಯವಹಾರ ₹ 500 ಕೋಟಿಯಿಂದ ₹ 1,525 ಕೋಟಿಗೆ, ಠೇವಣಿ ₹ 300 ಕೋಟಿಯಿಂದ ₹ 875 ಕೋಟಿಗೆ ಹೆಚ್ಚಳವಾಗಿದೆ' ಎಂದು ಸಂಸ್ಥೆಯ ಅಧ್ಯಕ್ಷ ಅನಿಲ್ ಲೋಬೊ ತಿಳಿಸಿದರು.

ಎಂಸಿಸಿ ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ಈಚೆಗೆ ಏರ್ಪಡಿಸಿದ್ದ 114ನೇ ಸಂಸ್ಥಾಪಕರ ದಿನಾಚರಣೆಯ ಅಧ್ಯಕ್ಷತೆ ವಹಿಸಿದ್ದ ಅವರು ಸಂಸ್ಥೆಯ ಸಂಸ್ಥಾಪಕ ಪಿ.ಎಫ್.ಎಕ್ಸ್. ಸಲ್ಡಾನ್ಹ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

'24 ವರ್ಷಗಳ ಬಳಿಕ ಬ್ಯಾಂಕಿನ ಶಾಖೆಗಳ ಸಂಖ್ಯೆ 16ರಿಂದ 21ಕ್ಕೆ ಏರಿಕೆಯಾಗಿದೆ. ಪ್ರಸ್ತುತ 21 ಶಾಖೆಗಳನ್ನು ಬ್ಯಾಂಕ್ ಹೊಂದಿದ್ದು, ಈ ಆರ್ಥಿಕ ವರ್ಷದಲ್ಲಿ 25ಕ್ಕೆ ವಿಸ್ತರಿಸುವ ಯೋಜನೆ ಇದೆ' ಎಂದು ತಿಳಿಸಿದರು.



ಅನಿಲ್ ಲೋಬೊ

ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್, 'ಎಂಸಿಸಿ ಬ್ಯಾಂಕ್ ಸಾಮಾಜಿಕ ಹೊಣೆಗಾರಿಕೆ ನಿಭಾಯಿಸುವ ಜನಪರ ಸಂಸ್ಥೆಯಾಗಿ ಹೊರಹೊಮ್ಮಿದೆ' ಎಂದರು.

'ವಿದ್ಯಾಧನ ಶಿಕ್ಷಣ ಯೋಜನೆ'ಯನ್ನು ಕರ್ಣಾಟಕ ಬ್ಯಾಂಕಿನ ನಿವೃತ್ತ ಮಹಾಪ್ರಬಂಧಕರಾದ ಮೀರಾ ಅರನ್ಹಾ ಉದ್ಘಾಟಿಸಿದರು. ಜೆರಾಲ್ಡ್ ಪಿಂಟೊ ಸಂಪಾದಕತ್ವದ ಬ್ಯಾಂಕಿನ ವಾರ್ತಾ ಪತ್ರವನ್ನು ಕೆಸಿಸಿಐ ಮಾಜಿ ಅಧ್ಯಕ್ಷ ಐಸಾಕ್ ವಾಸ್ ಬಿಡುಗಡೆ ಮಾಡಿದರು. ಚಾರ್ಟರ್ಡ್ ಅಕೌಂಟೆಂಟ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮ್ಯೂರಿಯಲ್ ಮಸ್ಕರೇನ್ಹಸ್ ಹಾಗೂ ಜಾಯ್ಸ್ಟನ್ ಡಿಸೋಜ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹೆನ್ರಿ ಮೆಂಡೋನ್ಸ, ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪುರಸ್ಕೃತ ರಿಶೆಲ್ ಫರ್ನಾಂಡಿಸ್ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಜೋಸೆಫ್ ಲೋಬೊ, ಕ್ಷೇವಿಯರ್ ಡಿಸೋಜ ಮತ್ತು ಪ್ರೇಮ್ ಜೆ. ಮೊರಾಸ್, ಬ್ಯಾಂಕಿನ ಹೊಸ ಲಾಂಛನ ವಿನ್ಯಾಸಗಾರ ಬನ್ನು ಫರ್ನಾಂಡಿಸ್ ಹಾಗೂ ಪಿಎಫ್‌ಎಕ್ಸ್ ಸ್ಮಾರಕ ಸಭಾಂಗಣದ ವಿನ್ಯಾಸಗಾರ ದೀಪಕ್ ಡಿಸೋಜ ಅವರನ್ನು ಗೌರವಿಸಲಾಯಿತು.

ಮನೋಜ್ ಲೋಪೆಜ್ ನೇತೃತ್ವದ ತಂಡ ಪ್ರಾರ್ಥನೆ ಗೀತೆ ಹಾಡಿತು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಸುನಿಲ್ ಮೆನೆಜಸ್ ವಂದಸಿದರು. ಕಾರ್ಯಕ್ರಮವನ್ನು ಜೇಸನ್ ಶಿರ್ತಾಡಿ ನಿರೂಪಿಸಿದರು. ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ರಾಯ್ ಕ್ಯಾಸ್ಟೆಲಿನೊ ಬ್ಯಾಂಕಿನ ನಿರ್ದೇಶಕರಾದ ಆಂಡ್ರ್ಯೂ, ಡಿಸೋಜ, ಹೆರಾಲ್ಡ್ ಮೊಂತೆರೊ, ಅನಿಲ್ ಪತ್ರಾವೊ, ಡೇವಿಡ್ ಡಿಸೋಜ, ಜೆ.ಪಿ.ರಾಡ್ರಿಗಸ್, ರೋಶನ್ ಡಿಸೋಜ, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸುಶಾಂತ್ ಸಲ್ಡಾನ್ಹ, ಐರಿನ್ ರೆಬೆಲ್ಲೊ, ಅಲ್ವಿನ್ ಪಿ. ಮೊಂತೆರೊ, ಫೆಲಿಕ್ಸ್ ಡಿಕ್ರೂಜ್ ಹಾಗೂ ಸಿ.ಜಿ. ಪಿಂಟೊ ಭಾಗವಹಿಸಿದ್ದರು.

*Samyuktha karnataka 11-05-2026*

# ಎಂಸಿಸಿ ಬ್ಯಾಂಕಿನಲ್ಲಿ 114ನೇ ಸಂಸ್ಥಾಪಕರ ದಿನಾಚರಣೆ

**ಸಂ.ಕ.ಸಮಾಚಾರ, ಮಂಗಳೂರು**

ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 114ನೇ ಸಂಸ್ಥಾಪಕರ ದಿನಾಚರಣೆಯನ್ನು ಆಡಳಿತ ಕಚೇರಿ ಆವರಣದಲ್ಲಿ ಆಚರಿಸಿತು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಸಂಸ್ಥಾಪಕರಾದ ದಿ.ಪಿ.ಎಫ್.ಎಕ್ಸ್.ಸಾಲ್ಡಾನ್ಹ ಅವರ ದೂರದೃಷ್ಟಿಯ ಸೇವೆಯನ್ನು ಸ್ಮರಿಸಲಾಯಿತು ಹಾಗೂ ಸಹಕಾರಿ ಕ್ಷೇತ್ರದಲ್ಲಿ ಬ್ಯಾಂಕ್ ಸಾಧಿಸಿರುವ ನಿರಂತರ ಪ್ರಗತಿ ಹಾಗೂ ಸ್ಥೈರ್ಯವನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರ ರತ್ನ ಅನಿಲ್ ಲೋಬೊ ವಹಿಸಿ ಮಾತನಾಡಿ, ಸಂಸ್ಥಾಪಕರ ದೃಷ್ಟಿಕೋನ ಮತ್ತು ಧ್ಯೇಯವನ್ನು ಸ್ಮರಿಸುವ ಉದ್ದೇಶದಿಂದ ಸಂಸ್ಥಾಪಕರ ದಿನಾಚರಣೆಯನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದ ಅವರು 2018ರಲ್ಲಿ ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ನಂತರ ಬ್ಯಾಂಕ್ ವೃತ್ತಿಪರತೆಯೊಂದಿಗೆ ಗಮನಾರ್ಹ ಬೆಳವಣಿಗೆ ಸಾಧಿಸಿದೆ ಎಂದು ಹೇಳಿದರು.

ಸೇಂಟ್ ಅಲೋಶಿಯಸ್, ಮಂಗಳೂರು ಇದರ ಉಪಕುಲಪತಿ ರೆವ್.ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಮಾತನಾಡಿ, ಅನಿಲ್ ಲೋಬೊ ಅವರ ನಾಯಕತ್ವವನ್ನು ಶ್ಲಾಘಿಸಿ, ಬ್ಯಾಂಕ್ ಕಳೆದ ಕೆಲವು ವರ್ಷಗಳಲ್ಲಿ ಸಾಧಿಸಿರುವ ಪರಿವರ್ತನೆಯನ್ನು ಮೆಚ್ಚಿದರು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ನೆರವಾಗುವ 'ವಿದ್ಯಾಧನ ವಿದ್ಯಾರ್ಥಿ ಕ್ರೆಡಿಟ್ ಯೋಜನೆ'ಯನ್ನು ವಿಶೇಷವಾಗಿ ಪ್ರಶಂಸಿಸಿದರು.

ಕರ್ನಾಟಕ ಬ್ಯಾಂಕ್‌ನ ಮಾಜಿ ಮಹಾಪ್ರಬಂಧಕ ಹಾಗೂ ಮುಖ್ಯ ಅನುಸರಣಾಧಿಕಾರಿ ಡಾ.ಮೀರಾ ಅರನ್ಹಾ ಮಾತನಾಡಿ, 'ವಿದ್ಯಾಧನ ಶಿಕ್ಷಣ ಯೋಜನೆ'ಯನ್ನು ಉದ್ಘಾಟಿಸಿ, ಮಾತನಾಡಿ, ಕಳೆದ ಏಳು–ಎಂಟು ವರ್ಷಗಳಲ್ಲಿ ಬ್ಯಾಂಕ್ ಸಾಧಿಸಿರುವ ಪ್ರಗತಿಯನ್ನು ಅಭಿನಂದಿಸಿದ ಅವರು, ಬ್ಯಾಂಕಿನ ಭವಿಷ್ಯ ಬೆಳವಣಿಗೆಯಲ್ಲಿ ಕೃತಕ ಬುದ್ಧಿಮತ್ತೆ, ಹವಾಮಾನ ಹಾಗೂ ಇಎಸ್‌ಜಿ ಅಪಾಯ ನಿರ್ವಹಣೆ ಮತ್ತು ವಿಶ್ವಾಸದ ಕಾಪಾಡುವಿಕೆ ಪ್ರಮುಖ ಪಾತ್ರವಹಿಸಲಿದೆ ಎಂದು ಹೇಳಿದರು.

ಮಂಗಳೂರು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಚನಾ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯ ಅಧ್ಯಕ್ಷ ರಾಯ್ ಕ್ಯಾಸ್ಟೆಲಿನೋ ಮಾತನಾಡಿ, ಕೇವಲ ಏಳು ವರ್ಷಗಳಲ್ಲಿ ಬ್ಯಾಂಕ್ ಮೂರು ಪಟ್ಟು ಬೆಳವಣಿಗೆ ಸಾಧಿಸಿರುವುದಕ್ಕೆ ಆಡಳಿತ ಮಂಡಳಿ ಮತ್ತು ಸಿಬ್ಬಂದಿಯನ್ನು ಅಭಿನಂದಿಸಿದರು.

ಕೆನರಾ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯ ಮಾಜಿ ಅಧ್ಯಕ್ಷ ಐಸಾಕ್ ವಾಸ್ ಮಾತನಾಡಿ, ಬ್ಯಾಂಕಿನ ಬುಲೆಟಿನ್ ಬಿಡುಗಡೆ ಮಾಡಿ, ಮಾತನಾಡಿ, ಸಂಸ್ಥಾಪಕರು ಬ್ಯಾಂಕನ್ನು ಸಮುದಾಯದ ವಿಶ್ವಾಸದ ಸಂಕೇತವಾಗಿ ಸ್ಥಾಪಿಸಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹೊಸದಾಗಿ ಅರ್ಹತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಸಿಎ ಮ್ಯೂರಿಯಲ್ ಮಸ್ಕರೇನ್ಹಾಸ್, ಸಿಎ ಜಾಯ್ಲಿನ್ ಡಿಸೋಜಾ ಅವರನ್ನು ಸನ್ಮಾನಿಸಲಾಯಿತು. ಕೇಂದ್ರ ಸೆಂಟ್ರಲ್ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹೆನ್ರಿ ಮೆಂಡೋನ್ಸಾ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ರಿಶೆಲ್ ಫೆರ್ನಾಂಡಿಸ್ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ.ಜೋಸೆಫ್ ಲೋಬೊ, ಝೇವಿಯರ್ ಡಿಸೋಜಾ, ಪ್ರೇಮ್ ಜೆ. ಮೊರಾಸ್ ಅವರನ್ನು ಗೌರವಿಸಲಾಯಿತು.

ನಿರ್ದೇಶಕರಾದ ಆಂಡ್ರೂ ಡಿಸೋಜಾ, ಹೆರಾಲ್ಡ್ ಮೊಂತೇರೊ, ಅನಿಲ್ ಪತ್ರಾವೊ, ಡೇವಿಡ್ ಡಿಸೋಜಾ, ಜೆ.ಪಿ.ರೋಡ್ರಿಗಸ್, ರೋಶನ್ ಡಿಸೋಜಾ, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸುಶಾಂತ್ ಸಾಲ್ಡಾನ್ಹಾ, ಐರಿನ್ ರೆಬೆಲ್ಲೊ, ಆಲ್ವಿನ್ ಪಿ.ಮೊಂತೇರೊ, ಫೆಲಿಕ್ಸ್ ಡಿಕ್ರೂಜ್, ಡಾ.ಜೆರಾಲ್ಡ್ ಪಿಂಟೊ, ಸಿ.ಜಿ.ಪಿಂಟೊ ಉಪಸ್ಥಿತರಿದ್ದರು.

*Hosadigantha 11-05-2026*

### ಎಂಸಿಸಿ ಬ್ಯಾಂಕಿನಲ್ಲಿ 114ನೇ ಸಂಸ್ಥಾಪಕರ ದಿನಾಚರಣೆ | ರೂ.13 ಕೋಟಿ ಲಾಭ

# 'ವಿದ್ಯಾಧನ ಶಿಕ್ಷಣ ಯೋಜನೆ' ಉದ್ಘಾಟನೆ

**• ಮಂಗಳೂರು:** ಎಂಸಿಸಿ ಬ್ಯಾಂಕ್ ಲಿಮಿಟೆಡ್ ತನ್ನ 114ನೇ ಸಂಸ್ಥಾಪಕರ ದಿನಾಚರಣೆಯನ್ನು ಆಡಳಿತ ಕಚೇರಿ ಆವರಣದಲ್ಲಿ ಭವ್ಯವಾಗಿ ಆಚರಿಸಿತು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಸಂಸ್ಥಾಪಕರಾದ ದಿ. ಪಿ.ಎಫ್.ಎಕ್ಸ್. ಸಲ್ಡಾನ್ಹ ಅವರ ದೂರದೃಷ್ಟಿಯ ಸೇವೆಯನ್ನು ಸ್ಮರಿಸಲಾಯಿತು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬ್ಯಾಂಕ್‌ನ ಅಧ್ಯಕ್ಷ ಸಹಕಾರ ರತ್ನ ಅನಿಲ್ ಲೋಬೊ, 2018ರಲ್ಲಿ ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ನಂತರ ಬ್ಯಾಂಕ್ ವೃತ್ತಿಪರತೆಯೊಂದಿಗೆ ಗಮನಾರ್ಹ ಬೆಳವಣಿಗೆ ಸಾಧಿಸಿದೆ. 24 ವರ್ಷಗಳ ಬಳಿಕ ಶಾಖೆಗಳ ಸಂಖ್ಯೆ 16ರಿಂದ 21ಕ್ಕೆ ಏರಿಕೆಯಾಗಿದೆ. ಬ್ಯಾಂಕಿನ ಒಟ್ಟು ವ್ಯವಹಾರ ರೂ.500 ಕೋಟಿಯಿಂದ ರೂ.1,525 ಕೋಟಿಗೆ ಏರಿಕೆಯಾಗಿದ್ದು, ಠೇವಣಿಗಳು ರೂ.300 ಕೋಟಿಯಿಂದ ರೂ.875 ಕೋಟಿಗೆ ಹೆಚ್ಚಳವಾಗಿವೆ. ಬ್ಯಾಂಕ್ ರೂ.13 ಕೋಟಿ ಲಾಭ ದಾಖಲಿಸಿದೆ. ಪ್ರಸ್ತುತ ಇರುವ 21 ಶಾಖೆಗಳನ್ನು ಈ ಆರ್ಥಿಕ ವರ್ಷದಲ್ಲಿ 25ಕ್ಕೆ ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಅತಿಥಿಯಾಗಿದ್ದ ಸೇಂಟ್ ಅಲೋಶಿಯಸ್ ಡೀಮ್ಡ್ ಟು ಬಿ ಯುನಿವರ್ಸಿಟಿ ಉಪಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ನೆರವಾಗುವ 'ವಿದ್ಯಾಧನ ವಿದ್ಯಾರ್ಥಿ ಕ್ರೆಡಿಟ್ ಯೋಜನೆ'ಯನ್ನು ಪ್ರಶಂಸಿಸಿದರು.

ಕರ್ನಾಟಕ ಬ್ಯಾಂಕ್‌ನ ಮಾಜಿ ಮಹಾಪ್ರಬಂಧಕಿ ಡಾ. ಮೀರಾ ಅರನ್ಹಾ ಅವರು 'ವಿದ್ಯಾಧನ ಶಿಕ್ಷಣ ಯೋಜನೆ'ಯನ್ನು ಉದ್ಘಾಟಿಸಿದರು. ಮಂಗಳೂರು ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ರಾಯ್ ಕ್ಯಾಸ್ಟೆಲಿನೊ, ಕೆಸಿಸಿಐ ಮಾಜಿ ಅಧ್ಯಕ್ಷ ಐಸಾಕ್ ವಾಸ್ ಮುಖ್ಯ ಅತಿಥಿಗಳಾಗಿದ್ದರು. ಬ್ಯಾಂಕಿನ ಮಹಾಪ್ರಬಂಧಕ ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು. ಐಸಾಕ್ ವಾಸ್ ಅವರು ಸಂಪಾದಕರಾದ ಡಾ. ಜೆರಾಲ್ಡ್ ಪಿಂಟೊ ಅವರೊಂದಿಗೆ ಬ್ಯಾಂಕಿನ ಬುಲೆಟಿನ್ ಬಿಡುಗಡೆ ಮಾಡಿದರು. ಹೊಸದಾಗಿ ಅರ್ಹತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಸಿಎ ಮ್ಯೂರಿಯಲ್ ಮಸ್ಕರೇನ್ಹಾಸ್ ಹಾಗೂ ಸಿಎ ಜಾಯ್ಲಿನ್ ಡಿಸೋಜ ಅವರನ್ನು ಸನ್ಮಾನಿಸಲಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹೆನ್ರಿ ಮೆಂಡೋನ್ಸಾ (ಎಚ್.ಎಂ.ಪೆರ್ನಾಲ್), ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ರಿಶೆಲ್ ಫೆರ್ನಾಂಡಿಸ್ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಜೋಸೆಫ್ ಲೋಬೊ, ಝೇವಿಯರ್ ಡಿಸೋಜ ಮತ್ತು ಪ್ರೇಮ್ ಜೆ.ಮೊರಾಸ್ ಅವರನ್ನು ಗೌರವಿಸಲಾಯಿತು.

ನಿರ್ದೇಶಕರಾದ ರೋಶನ್ ಡಿಸೋಜ ಹಾಗೂ ಅನಿಲ್ ಪತ್ರಾವೊ ಅವರನ್ನು ಅವರ ಜನ್ಮದಿನದ ಅಂಗವಾಗಿ ಸನ್ಮಾನಿಸಲಾಯಿತು. ಬ್ಯಾಂಕಿನ ಹೊಸ ಲೋಗೋ ವಿನ್ಯಾಸಗೊಳಿಸಿದ ಬಸ್ಟಿ ಫೆರ್ನಾಂಡಿಸ್ ಹಾಗೂ ಪಿಎಫ್‌ಎಕ್ಸ್ ಮೆಮೋರಿಯಲ್ ಆಡಿಟೋರಿಯಂ ವಿನ್ಯಾಸಗೊಳಿಸಿದ ವಾಸ್ತುಶಿಲ್ಪಿ ದೀಪಕ್ ಡಿಸೋಜ ಅವರನ್ನು ಗೌರವಿಸಲಾಯಿತು. ಜೆಸ್ಸಿ ಶಿರ್ವಾಡಿ ಕಾರ್ಯಕ್ರಮ ನಿರೂಪಿಸಿದರು.

ನಿರ್ದೇಶಕರಾದ ಆಂಡ್ರ್ಯೂ ಡಿಸೋಜ, ಹೆರಾಲ್ಡ್ ಮೊಂತೇರೊ, ಅನಿಲ್ ಪತ್ರಾವೊ, ಡೇವಿಡ್ ಡಿಸೋಜ, ಜೆ.ಪಿ.ರೊಡ್ರಿಗಸ್, ರೋಶನ್ ಡಿಸೋಜ, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸುಶಾಂತ್ ಸಲ್ಡಾನ್ಹಾ, ಐರಿನ್ ರೆಬೆಲ್ಲೊ, ಆಲ್ವಿನ್ ಪಿ. ಮೊಂತೇರೊ, ಫೆಲಿಕ್ಸ್ ಡಿಕ್ರೂಜ್, ಡಾ. ಜೆರಾಲ್ಡ್ ಪಿಂಟೊ, ಸಿ.ಜಿ. ಪಿಂಟೊ ಉಪಸ್ಥಿತರಿದ್ದರು.

*Times of India 11-05-2026*

# MCC Bank marks 114th Founders Day

TIMES NEWS NETWORK

**Mangaluru:** MCC Bank Limited celebrated its 114th Founders Day at its Administrative Office Campus, recalling the vision and legacy of its founder, the late PFX Saldanha, and highlighting the bank's remarkable growth in recent years.

The programme was presided over by Anil Lobo, chairman of the Bank. Rev Fr Praveen Martis, vice-chancellor of St Aloysius (deemed to be university), Mangaluru, and others were the chief guests. In his welcome address, chairman Lobo said that the Founders Day celebration was initiated after his team took over management of the bank to honour the founders' vision and mission.

He said the bank witnessed remarkable growth after the new board assumed charge in 2018, with increased professionalism and collective effort.

*Varthabharathi 12-05-2026*

# ಅಲೋಶಿಯಸ್ ಸಂಸ್ಥೆಯ ರೆಕ್ಟರ್ ಆಗಿ ರೆ.ಫಾ.ಬ್ರಾಯನ್ ಪಿರೇರ ಅಧಿಕಾರ ಸ್ವೀಕಾರ



ಮಂಗಳೂರು, ಮೇ 11: ನಗರದ ಸಂತ ಅಲೋಶಿಯಸ್ ಸಂಸ್ಥೆಗಳ 31ನೇ ರೆಕ್ಟರ್ ಆಗಿ ರೆ.ಫಾ. ಬ್ರಾಯನ್ ಪಿರೇರ ಎಸ್.ಜೆ. ರವಿವಾರ ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು. ವೈಸ್ ರೆಕ್ಟರ್ ರೆ.ಡಾ.ಮೆಲ್ವಿನ್ ಡಿಕುನ್ಹಾ ಎಸ್.ಜೆ. ಹೊಸ ರೆಕ್ಟರ್‌ರನ್ನು ಸ್ವಾಗತಿಸಿ, ಸಂಸ್ಥೆಗಳ ನಾಯಕತ್ವದ ಜವಾಬ್ದಾರಿಯನ್ನು ಹಸ್ತಾಂತರಿಸಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಫಾ.ಬ್ರಾಯನ್, ಸಂಸ್ಥೆಯ ಪರಂಪರೆ ಮತ್ತು ದಿವಂಗತ ಫಾ. ಮೆಲ್ವಿನ್ ಜೋಸೆಫ್ ಪಿಂಟೊರ ಸಹಾನುಭೂತಿಯ ನಾಯಕತ್ವ ಬೆಳೆಸಲು ಎಲ್ಲರ ಸಹಕಾರ ಅಗತ್ಯವಿದೆ ಎಂದರು.

ಎ.10, 2026ರಂದು ಮಾಜಿ ರೆಕ್ಟರ್ ರೆ.ಫಾ.ಮೆಲ್ವಿನ್ ಜೋಸೆಫ್ ಪಿಂಟೊ ಅವರ ಅಕಾಲಿಕ ಮರಣದ ನಂತರ ಈ ನೇಮಕಾತಿ ನಡೆದಿದ್ದು, ಸೊಸೈಟಿ ಆಫ್ ಜೀಸಸ್‌ನ ಸುಪೀರಿಯರ್ ಜನರಲ್ ರೆ. ಫಾ.ಆರ್ಟುರೊ ಅಬಾಸ್ಕಲ್ ಸೋಸಾರವರು ಫಾ.ಬ್ರಾಯನ್ ಪಿರೇರರನ್ನು ನೂತನ ರೆಕ್ಟರ್ ಆಗಿ ನೇಮಿಸಿದ್ದರು.

ಫಾ.ಬ್ರಾಯನ್‌ರವರು ತಿರುಚ್ಚಿಯ ಸಂತ ಜೋಸೆಫ್ಸ್ ಕಾಲೇಜಿನಿಂದ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ ಮತ್ತು ಅಮೆರಿಕದ ಮೇರಿಲ್ಯಾಂಡ್‌ನ ಲೊಯೊಲಾ ವಿಶ್ವವಿದ್ಯಾನಿಲಯದಿಂದ ಕೌನ್ಸೆಲಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಜೆಸುಟ್ ಸಂಸ್ಥೆಗಳಲ್ಲಿ ಈಗಾಗಲೇ ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದಾರೆ.

Udayavani 12-05-2026

# ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ಆಗಿ ಫಾ। ಬ್ರ್ಯಾಯನ್ ಪಿರೇರಾ ಅಧಿಕಾರ ಸ್ವೀಕಾರ

**ಮಹಾನಗರ, ಮೇ 11:** ಮಂಗಳೂರಿನ ಸಂತ ಅಲೋಶಿಯಸ್ ಸಂಸ್ಥೆಗಳ 31ನೇ ರೆಕ್ಟರ್ ಆಗಿ ರೆ। ಫಾ। ಬ್ರ್ಯಾಯನ್ ಪಿರೇರಾ ಎಸ್.ಜೆ. ಅವರು ಮೇ 10ರಂದು ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು.

ವೈಸ್ ರೆಕ್ಟರ್‌ರೆ। ಡಾ। ಮೆಲ್ವಿನ್ ಡಿ'ಕುನ್ಹ ಎಸ್.ಜೆ. ಅವರು ಹೊಸ ರೆಕ್ಟರ್‌ಅವರನ್ನು ಸ್ವಾಗತಿಸಿ, ಸಂಸ್ಥೆಗಳ ನಾಯಕತ್ವದ ಜವಾಬ್ದಾರಿಯನ್ನು ಅವರಿಗೆ ಹಸ್ತಾಂತರಿಸಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಫಾ। ಬ್ರ್ಯಾಯನ್ ಅವರು, ಸವಾಲುಗಳನ್ನು ಎದುರಿಸಿ ಸಂಸ್ಥೆಯ ಪರಂಪರೆಯನ್ನು



ಮುಂದುವರಿಸಬೇಕಾಗಿದೆ. ಇದಕ್ಕೆ ದೇವರ ಆಶೀರ್ವಾದವೂ ಬೇಕಾಗಿದೆ ಎಂದರು.

ಎ. 10ರಂದು ಮಾಜಿ ರೆಕ್ಟರ್ ರೆ। ಫಾ। ಮೆಲ್ವಿನ್ ಜೋಸೆಫ್ ಪಿಂಟೊ ಎಸ್.ಜೆ. ಅವರ ಅಕಾಲಿಕ ಮರಣದ ಅನಂತರ ಈ ನೇಮಕಾತಿ ನಡೆದಿದ್ದು, ಸೊಸೈಟಿ ಆಫ್ ಜೀಸಸ್‌ನ ಸುಪೀರಿಯರ್ ಜನರಲ್ ರೆ। ಫಾ। ಆರ್ಟುರೊ ಅಬಾಸ್ಕಲ್ ಸೋಸಾ ಎಸ್.ಜೆ. ಅವರು ಎ.16 ರಂದು ಫಾ। ಬ್ರ್ಯಾಯನ್ ಪಿರೇರಾ ಎಸ್.ಜೆ. ಅವರನ್ನು ಹೊಸ ರೆಕ್ಟರ್‌ಆಗಿ ನೇಮಿಸಿದ್ದರು.

ಒಬ್ಬ ನಿಪುಣ ಶೈಕ್ಷಣಿಕ ಮತ್ತು ಮಾರ್ಗದರ್ಶಕ ಫಾ। ಬ್ರ್ಯಾಯನ್, ತಿರುಚಿಯ ಸಂತ ಜೋಸೆಫ್ಸ್ ಕಾಲೇಜಿನಿಂದ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ ಮತ್ತು ಅಮೆರಿಕದ ಮೇರಿಲ್ಯಾಂಡ್‌ನ ಲೊಯೊಲಾ ವಿಶ್ವವಿದ್ಯಾಲಯದಿಂದ ಕೌನ್ಸೆಲಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.

ನಾಯಕತ್ವ ಅಭಿವೃದ್ಧಿಯಲ್ಲಿ ತರಬೇತಿ ಪಡೆದಿದ್ದು ಪ್ರಮಾಣೀಕೃತ ಎನ್.ಎಲ್.ಪಿ ತರಬೇತುದಾರರಾಗಿದ್ದಾರೆ.

Deccan Herald 12-052026

# Fr Brian Pereira assumes charge as 31st Rector of St Aloysius Institutions

**MANGALURU, DHNS:** Rev Fr Brian Pereira assumed office as the Rector of St Aloysius Institutions, Mangaluru, after a solemn prayer held at the Jesuit Oratory of the St Aloysius Community.

Fr Brian took over as the 31st rector of the institution.

Fr Melwyn Dcunha, the vice-rector welcomed the new rector and handed over the baton of leadership of the 146 years old institutions in a symbolic way presenting him a statue of Jesus, the Good Shepherd and the keys of tabernacle of the Jesuit oratory.



Rev Fr Brian Pereira

Taking up the responsibility Fr Brian said, "We need to allow the legacy of the institution and empathetic leadership of late Fr Melwin Joseph Pinto continue to grow."

The appointment comes in the wake of the untimely demise of former Rector Rev Fr Melwin Joseph Pinto on April 10.

Fr Brian has held several important positions within Jesuit institutions and organisations. He previously served as the vice-president of Bangalore Jesuit Educational Society, Rector of Jesuit communities, Director of Navasadhana Jesuit Pre-Novitiate, and in-charge of Jesuit Youth Works in South Asia. He was also the Founding Director of Karnataka Jesuit Youth Apostolate.

*Times of India 12-05-2026*

# Fr Brian Pereira takes charge as rector of St Aloysius Institutions

TIMES NEWS NETWORK

**Mangaluru:** Following a solemn prayer service held at the Jesuit Oratory of the St Aloysius Community in the presence of fellow Jesuits on Sunday, **Fr Brian Pereira**, SJ, assumed office as the rector of St Aloysius Institutions.



He took over as the 31st rector of the institution. Fr Melwyn Dcunha, SJ, vice-rector, welcomed the new rector and handed over the baton of leadership of the 146-year-old institutions by presenting him a statue of Jesus, the Good Shepherd, and the keys of the tabernacle of the Jesuit oratory.

Taking up the responsibility, Fr Brian said, "We need to allow legacy of the institution and empathetic leadership of Late Fr Melwin Joseph Pinto to grow."

The appointment comes in the wake of the demise of former Rector Rev Fr Melwin Joseph Pinto, SJ, on April 10. Subsequently, Fr Arturo Abascal Sosa, SJ, superior general of the Society of Jesus, appointed Fr Brian Pereira as the new rector on April 16.

Fr Brian brings decades of experience in education, administration, leadership training and social outreach. He holds an MSc in chemistry from St Josephs College, Trichy, and a master's degree in counselling from Loyola University, Maryland, USA. A certified NLP trainer and life skills coach, he has trained thousands of young people across India, equipping them with leadership qualities, life skills and value-based education.

He previously served as vice-president of the Bangalore Jesuit Educational Society, rector of Jesuit communities, director of Navasadhana Jesuit Pre-Novitiate, and in-charge of Jesuit Youth Works in South Asia, and was also the founding director of the Karnataka Jesuit Youth Apostolate.

His administrative experience includes serving as rector of St Joseph's College (autonomous), Bengaluru, and later as rector of St Joseph's Institutions, Bengaluru. Most recently, he served as director of the Human Resource Development Centre of the Karnataka Jesuit Province. He is the visionary behind the IGNITORS Integral Formation Programme and played a significant role in MAGIS initiatives.

*Samyukta Karnataka 12-05-2026*

# ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ಪದಗ್ರಹಣ

**ಸಂ.ಕ.ಸಮಾಚಾರ, ಮಂಗಳೂರು**

ನಗರದ ಸಂತ ಅಲೋಶಿಯಸ್ ಸಂಸ್ಥೆಗಳ 31ನೇ ರೆಕ್ಟರ್ ಆಗಿ ರೆ.ಫಾ.ಬ್ರಾಯನ್ ಪಿರೇರಾ ಎಸ್.ಜೆ. ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು.

ವೈಸ್ ರೆಕ್ಟರ್ ರೆ.ಡಾ.ಮೆಲ್ವಿನ್ ಡಿಕುನ್ಹಾ ಎಸ್.ಜೆ.ಹೊಸ ರೆಕ್ಟರ್ ಅವರನ್ನು ಸ್ವಾಗತಿಸಿ, ಸಂಸ್ಥೆಗಳ ನಾಯಕತ್ವದ ಜವಾಬ್ದಾರಿಯನ್ನು ಅವರಿಗೆ ಹಸ್ತಾಂತರಿಸಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಫಾ.ಬ್ರಾಯನ್, ಸಂಸ್ಥೆಯ ಪರಂಪರೆ ಮತ್ತು ದಿವಂಗತ ಫಾದರ್ ಮೆಲ್ವಿನ್ ಜೋಸೆಫ್ ಪಿಂಟೊ ಅವರ ಸಹಾನುಭೂತಿಯ ನಾಯಕತ್ವವು ಬೆಳೆಸಲು ಎಲ್ಲರ ಸಹಕಾರದ ಅಗತ್ಯವಿದೆ ಎಂದರು.

ಏ. 10, 2026ರಂದು ಮಾಜಿ ರೆಕ್ಟರ್ ರೆ.ಫಾ.ಮೆಲ್ವಿನ್ ಜೋಸೆಫ್ ಪಿಂಟೊ ಅವರ ಅಕಾಲಿಕ ಮರಣದ ನಂತರ ಈ ನೇಮಕಾತಿ ನಡೆದಿದ್ದು, ಸೊಸೈಟಿ ಆಫ್ ಜೀಸಸ್ನ ಸುಪೀರಿಯರ್ ಜನರಲ್ ರೆ.ಫಾ. ಆರ್ಟುರೊ ಅಬಾಸ್ಕಲ್ ಸೋಸಾ ರವರು ಫಾ.ಬ್ರಾಯನ್ ಪಿರೇರರನ್ನು ಹೊಸ ರೆಕ್ಟರ್ ಆಗಿ ನೇಮಿಸಿದ್ದರು.

ತಿರುಚಿಯ ಸಂತ ಜೋಸೆಫ್ಸ್ ಕಾಲೇಜಿನಿಂದ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ ಮತ್ತು ಅಮೆರಿಕದ ಮೇರಿಲ್ಯಾಂಡ್‌ನ ಲೊಯೊಲಾ ವಿಶ್ವವಿದ್ಯಾನಿಲಯದಿಂದ ಕೌನ್ಸೆಲಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಫಾ.ಬ್ರಾಯನ್ ಪಡೆದಿದ್ದಾರೆ. ಫಾ.ಬ್ರಾಯನ್ ಅವರು ಜೆಸ್ವಿಟ್ ಸಂಸ್ಥೆಗಳಲ್ಲಿ ಈಗಾಗಲೇ ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದಾರೆ.



*Kannadaprabha 12-05-2026*

# ಅಲೋಶಿಯಸ್ ಸಂಸ್ಥೆಗಳ ರೆಕ್ಟರ್‌ಆಗಿ ಫಾ.ಬ್ರಾಯನ್ ಪಿರೇರಾ ಪದಗ್ರಹಣ

## ರೆ.ಫಾ. ಮೆಲ್ವಿನ್ ಜೋಸೆಫ್ ಪಿಂಟೊ ನಿಧನ ನಂತರ ನೇಮಕ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರಿನ ಸಂತ ಅಲೋಶಿಯಸ್ ಸಂಸ್ಥೆಗಳ 31ನೇ ರೆಕ್ಟರ್‌ಆಗಿ ರೆ.ಫಾ. ಬ್ರಾಯನ್ ಪಿರೇರಾ ಎಸ್.ಜೆ. ಅವರು ಭಾನುವಾರ ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು. ವೈಸ್-ರೆಕ್ಟರ್‌ರೆ. ಡಾ.ಮೆಲ್ವಿನ್ ಡಿಕುನ್ಹಾ ಎಸ್.ಜೆ. ಅವರು ಹೊಸ ರೆಕ್ಟರ್‌ಅವರನ್ನು ಸ್ವಾಗತಿಸಿ, ಸಂಸ್ಥೆಗಳ ನಾಯಕತ್ವದ ಜವಾಬ್ದಾರಿಯನ್ನು ಅವರಿಗೆ ಹಸ್ತಾಂತರಿಸಿದರು. ಅಧಿಕಾರ ಸ್ವೀಕರಿಸಿ ಮಾತನಾಡಿದ ಫಾ.ಬ್ರಾಯನ್, ಸಂಸ್ಥೆಯ ಪರಂಪರೆ ಮತ್ತು ದಿವಂಗತ ಫಾದರ್‌ಮೆಲ್ವಿನ್ ಜೋಸೆಫ್ ಪಿಂಟೊ ಅವರ ಸಹಾನುಭೂತಿಯ ನಾಯಕತ್ವವು ಬೆಳೆಯಲು ನಾವು ಅವಕಾಶ ನೀಡಬೇಕು. ನಿಜ ಜೀವನವು ಸವಾಲಿನದ್ದಾಗಿದೆ. ಆದರೆ ದೇವರು ನಮ್ಮನ್ನು ಹೇಗೆ ಮುನ್ನಡೆಸುತ್ತಾನೆ ಎಂಬುದು ಮುಖ್ಯವಾಗಿದೆ ಎಂದರು.



ಏ.10 ರಂದು ಮಾಜಿ ರೆಕ್ಟರ್‌ರೆ.ಫಾ. ಮೆಲ್ವಿನ್ ಜೋಸೆಫ್ ಪಿಂಟೊ ಎಸ್‌ಜೆ ಅವರ ಅಕಾಲಿಕ ಮರಣದ ನಂತರ ಈ ನೇಮಕಾತಿ ನಡೆದಿದ್ದು, ಸೊಸೈಟಿ ಆಫ್ ಜೀಸಸ್‌ನ ಸುಪೀರಿಯರ್‌ಜನರಲ್ ರೆ.ಫಾ.ಆರ್ಟುರೊ ಅಬಾಸ್ಕಲ್ ಸೋಸಾ, ಎಸ್‌ಜೆ ಅವರು ಏ.16ರಂದು ಫಾ.ಬ್ರಾಯನ್ ಪಿರೇರಾ ಎಸ್.ಜೆ. ಅವರನ್ನು ಹೊಸ ರೆಕ್ಟರ್‌ಆಗಿ ನೇಮಿಸಿದ್ದರು.

ತಮ್ಮ ಕ್ರಿಯಾತ್ಮಕ ನಾಯಕತ್ವ ಮತ್ತು ಯುವಜನ ರಚನೆಗೆ ಆಳವಾದ ಬದ್ಧತೆಗಾಗಿ ವ್ಯಾಪಕವಾಗಿ ಗೌರವಿಸಲ್ಪಟ್ಟ ಫಾದರ್‌ಬ್ರಿಯಾನ್, ಶಿಕ್ಷಣ, ಆಡಳಿತ, ನಾಯಕತ್ವ ತರಬೇತಿ ಮತ್ತು ಸಾಮಾಜಿಕ ಸಂಪರ್ಕದಲ್ಲಿ ದಶಕಗಳ ಅನುಭವವನ್ನು ತರುತ್ತಾರೆ.

ಒಬ್ಬ ನಿಪುಣ ಶೈಕ್ಷಣಿಕ ಮತ್ತು ಮಾರ್ಗದರ್ಶಕ ಫಾ. ಬ್ರಾಯನ್, ತಿರುಚಿಯ ಸಂತ ಜೋಸೆಫ್ಸ್ ಕಾಲೇಜಿನಿಂದ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಮತ್ತು ಅಮೆರಿಕದ ಮೇರಿಲ್ಯಾಂಡ್‌ನ ಲೊಯೊಲಾ ವಿಶ್ವವಿದ್ಯಾಲಯದಿಂದ ಕೌನ್ಸೆಲಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ನಾಯಕತ್ವ ಅಭಿವೃದ್ಧಿಯಲ್ಲಿ ತರಬೇತಿ ಪಡೆದಿದ್ದು ಪ್ರಮಾಣೀಕೃತ ಎನ್.ಎಲ್.ಪಿ. ತರಬೇತುದಾರರಾಗಿದ್ದಾರೆ. ಅಲ್ಲದೆ, ಜೆಸ್ಯೂಟ್ ಸಂಸ್ಥೆಗಳಲ್ಲಿ ಈಗಾಗಲೇ ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿ ದ್ದಾರೆ.

ಅಧ್ಯಾಪಕರು, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಮತ್ತು ಹಿತೈಷಿಗಳು ಸೇರಿದಂತೆ ಸಂತ ಅಲೋಶಿಯಸ್ ಸಮುದಾಯದ ಸದಸ್ಯರು ಅವರ ನೇಮಕಾತಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ.

*Vijayakarnataka 12-05-2026*

# ಅಲೋಶಿಯಸ್‌ಗೆ ನೂತನ ರೆಕ್ಟರ್ ಬ್ರಾಯನ್ ಪಿರೇರ

**ಮಂಗಳೂರು:** ಸಂತ ಅಲೋಶಿಯಸ್ ಸಂಸ್ಥೆಗಳ 31ನೇ ರೆಕ್ಟರ್ ಆಗಿ ಫಾದರ್ ಬ್ರಾಯನ್ ಪಿರೇರ ಭಾನುವಾರ ಅಧಿಕಾರ ಸ್ವೀಕರಿಸಿದರು. ಉಪ ರೆಕ್ಟರ್ ಡಾ. ಮೆಲ್ವಿನ್ ಡಿಕುನ್ಹ ನೂತನ ರೆಕ್ಟರ್ ರನ್ನು ಸ್ವಾಗತಿಸಿ, ಸಂಸ್ಥೆಗಳ ನಾಯಕತ್ವದ ಜವಾಬ್ದಾರಿ ಹಸ್ತಾಂತರಿಸಿದರು. ಮಾಜಿ ರೆಕ್ಟರ್ ಫಾದರ್ ಮೆಲ್ವಿನ್ ಜೋಸೆಫ್ ಪಿಂಟೊ ನಿಧನದಿಂದ ತೆರವಾದ ಸ್ಥಾನಕ್ಕೆ ಹೊಸ ರೆಕ್ಟರ್ ನೇಮಕ ನಡೆದಿದೆ.



*Indian Express 12-05-2026*

# Fr Brian Pereira S J assumes office as 31st Rector of St Aloysius

EXPRESS NEWS SERVICE
@ Mangaluru



Fr Brian Pereira

FR Brian Pereira, SJ, assumed office as the Rector of St Aloysius Institutions, Mangaluru, on Sunday. Fr Melwyn Dcunha, SJ, the Vice-rector welcomed the new 31st rector and facilitated him handing over the baton of leadership of the 146-years-old institution in Mangaluru in a symbolic way presenting him a statue of Jesus, the Good Shepherd and the keys of tabernacle of the Jesuit oratory.

Taking up the responsibility, Fr Brian said, "We need to allow the legacy of the institution and empathetic leadership of Late Fr Melwin Joseph Pinto to continue to grow. Real life is challenging, but it is also exciting to see how God leads us. God counts on us."

The appointment comes in the wake of the untimely demise of former Rector Fr Melwin Joseph Pinto, SJ, on April 10, 2026. Subsequently, Fr Arturo Abascal Sosa, SJ, Superior General of the Society of Jesus, appointed Fr Brian Pereira as the new Rector on April 16, 2026. A statement said Fr Brian brings decades of experience in education, administration, leadership training, and social outreach. An accomplished academic and mentor, Fr Brian holds M.Sc in Chemistry from St Josephs College, Trichy, and a Master's degree in Counselling from Loyola University, Maryland, USA. He has undergone extensive training in youth formation and leadership development and is a certified NLP trainer and life skills coach. Over the years, he has trained thousands of young people across India, equipping them with leadership qualities, life skills, and value-based education.

Fr Brian has held several important positions within Jesuit institutions and organisations. He previously served as Vice-President of the Bangalore Jesuit Educational Society, Rector of Jesuit communities, Director of Navasadhana Jesuit Pre-Novitiate, and in charge of Jesuit Youth Works in South Asia. He was also the Founding Director of the Karnataka Jesuit Youth Apostolate.

His administrative experience includes serving as Rector of St Joseph's College (Autonomous), Bengaluru, and later as Rector of St Joseph's Institutions, Bengaluru. Most recently, he served as Director of the Human Resource Development Centre of the Karnataka Jesuit Province.

*Hosadigantha 12-05-2026*

# ಫಾ.ಬ್ರಾಯನ್ ಪಿರೇರಾ ಅಧಿಕಾರ ಸ್ವೀಕಾರ



**ಮಂಗಳೂರು:** ಮಂಗಳೂರಿನ ಸಂತ ಅಲೋಶಿಯಸ್ ಸಂಸ್ಥೆಗಳ 31ನೇ ರೆಕ್ಟರ್ ಆಗಿ ರೆ.ಫಾ. ಬ್ರಾಯನ್ ಪಿರೇರಾ ಅವರು ಭಾನುವಾರ ಅಧಿಕಾರ ವಹಿಸಿಕೊಂಡರು. ವೈಸ್ ರೆಕ್ಟರ್ ಫಾ.ಮೆಲ್ವಿನ್ ಡಿಕುನ್ಹಾ ಹೊಸ ರೆಕ್ಟರ್ ಅವರನ್ನು ಸ್ವಾಗತಿಸಿ, ಸಂಸ್ಥೆಗಳ ನಾಯಕತ್ವದ ಜವಾಬ್ದಾರಿಯನ್ನು ಅವರಿಗೆ ಹಸ್ತಾಂತರಿಸಿದರು. ಅಧಿಕಾರ ಸ್ವೀಕರಿಸಿ ಮಾತನಾಡಿದ ಫಾ.ಬ್ರಾಯನ್, ಸಂಸ್ಥೆಯ ಪರಂಪರೆ ಮತ್ತು ದಿವಂಗತ ಫಾದರ್ ಮೆಲ್ವಿನ್ ಜೋಸೆಫ್ ಪಿಂಟೊ ಅವರ ಸಹಾನುಭೂತಿಯ ನಾಯಕತ್ವವು ಬೆಳೆಯಲು ನಾವು ಅವಕಾಶ ನೀಡಬೇಕು. ನಿಜ ಜೀವನವು ಸವಾಲಿನದ್ದಾಗಿದೆ, ಆದರೆ ದೇವರು ನಮ್ಮನ್ನು ಹೇಗೆ ಮುನ್ನಡೆಸುತ್ತಾನೆ ಎಂಬುದು ಮುಖ್ಯವಾಗಿದೆ ಎಂದರು.

*News Trail 12-05-2026*

# Fr Brian Pereira assumes office as rector of St Aloysius Institutions

**NT Correspondent**
Mangaluru

Fr Brian Pereira, SJ, officially assumed office as the rector of St Aloysius Institutions, Mangaluru, after a solemn prayer held at the Jesuit Oratory of the St Aloysius Community on May 10, in the presence of fellow Jesuits.

Fr Brian took over as the 31st rector of the institution. Fr Melwyn D'Cunha, SJ the vice-rector welcomed the new rector and facilitated him handing over the baton of leadership of the 148 years old institutions in Mangaluru in a symbolic way presenting him a statue of Jesus, the Good Shepherd and the keys of tabernacle of the Jesuit oratory. Taking up the responsibility Fr Brian said, "We need to allow the legacy of the institution and empathetic leadership of Late Fr Melwin Joseph Pinto continue to grow. Real life is challenging but it is also exciting to see how God leads us. God counts on us".

The appointment comes in the wake of the untimely demise of former rector Fr Melwin Joseph Pinto, SJ, on April 10, which left the Aloysius community mourning the loss of a visionary leader. Subsequently, Fr Arturo Abascal Sosa, SJ, superior general of the Society of Jesus, appointed Fr Brian Pereira as the new Rector on April 16.



Widely respected for his dynamic leadership and deep commitment to youth formation, Fr Brian brings decades of experience in education, administration, leadership training, and social outreach.

An accomplished academic and mentor, Fr Brian holds MSc in chemistry from St Josephs College, Trichy and a master's degree in counselling from Loyola University, Maryland, USA. He has undergone extensive training in youth formation and leadership development and is a certified NLP trainer and life skills coach. Over the years, he has trained thousands of young people across India, equipping them with leadership qualities, life skills, and value-based education.

Fr Brian has held several important positions within Jesuit institutions and organisations. He previously served as vice-president of the Bangalore Jesuit Educational Society, Rector of Jesuit communities, director of Navasadhana Jesuit Pre-Novitiate, and in-charge of Jesuit Youth Works in South Asia. He was also the founding director of the Karnataka Jesuit Youth Apostolate.

His administrative experience includes serving as rector of St Joseph's College (Autonomous), Bengaluru and later as rector of St Joseph's Institutions, Bengaluru. Most recently, he served as director of the Human Resource Development Centre of the Karnataka Jesuit Province.

Fr Brian is especially known for his pioneering work in youth empowerment initiatives. He is the visionary behind the IGNITORS Integral Formation Programme, which has positively impacted more than two lakh youth across the country by promoting leadership, character formation, and personal growth. He also played a significant role in MAGIS initiatives aimed at the integral development of Catholic youth in Karnataka.

*Indian Express 15-05-2026*

# 'Vinchnar Kaaniyo' by Vally Vagga released

EXPRESS NEWS SERVICE
@ Mangaluru

A Konkani book 'Vinchnar Kaaniyo' (Selected Stories) penned by Mysuru-based writer Vally Vagga aka Valerian D'Souza, was released at St Aloysius Deemed University's Sahodaya Auditorium in Mangaluru on Thursday.

Speaking at the event, Melvyn Rodrigues, poet and member of the Executive Council of the Sahitya Akademi, as well as Convener of the Konkani Advisory Board, praised Vally Vagga's lifelong contribution to the Konkani language and literature.

"When I began writing in Konkani, Vally Vagga was already active, and even today he continues with remarkable consistency. To us younger writers, he is not only an elder brother but also a unifier - someone who bridges differences among Konkani authors and strengthens relationships. His six decades of dedicated literary service deserve the highest respect," he said.

H. M. Pernal, a Sahitya Akademi Award-winning writer, introduced the book. He highlighted that since beginning his literary journey in 1964, Vally Vagga has written extensively in both Konkani and Kannada. He remarked that stories written across three decades - 1966, 1996, and 2026 - stand as testimony to their timeless relevance.



Writer Vally Vagga, Melvyn Rodrigues, H M Pernal and others at the book release

## Digital News Links

1. Global Degrees Mangalore launched to guide students towards global education opportunities
https://www.daijiworld.com/news/newsDisplay?newsID=1313716
2. Vinchnnar Motiyam: Sardaranchi Sinoll | ವಿಂಚ್ಣಾರ್ ಮೊತಿಯಾಂ: ಸರ್ದಾರಾಂಚಿ ಸಿನೊಲ್
https://www.youtube.com/watch?v=hLox-vbYkl8
3. St Aloysius University signs MoU to establish Centre for Religion and Culture
https://daijiworld.com/news/newsDisplay?newsID=1313841
4. St Aloysius University's Santhosh Notagar awarded scholarship to attend Asia Pacific Conference 2026
https://daijiworld.com/news/newsDisplay?newsID=1314025
5. Mangaluru: Fr Brian Pereira SJ assumes office as 31st rector of St Aloysius Institutions
https://www.daijiworld.com/news/newsDisplay?newsID=1314199
6. Mangaluru: Astel Christopher Crasta makes St Aloysius University proud with global ACCA achievement
https://www.daijiworld.com/news/newsDisplay?newsID=1314262
7. Capt Shakin Raj of St Aloysius University receives DDG Commendation Award-2026
https://daijiworld.com/news/newsDisplay?newsID=1314534

**We invite you to visit** https://digitallibrary.staloysius.edu.in **to access the archives of news clippings related to our University. The archive serves as a valuable repository of media coverage, documenting important events, accomplishments, and developments of the University.**